ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Swabhimani Sahakari

Pages - 28, ₹12

# ಸ್ವಾಭಿಮಾನಿ ಸಹಕಾರಿ

Volume -13
Issue - 02
February - 2016

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

## ಸ್ಟಾರ್ಟ್ ಅಪ್ ಇಂಡಿಯಾ

## ಪ್ರಧಾನ ಮಂತ್ರಿ ಮೋದಿಯವರಿಂದ ಕ್ರಿಯಾ ಯೋಜನೆ ಬಿಡುಗಡೆ




- ಯುವ ಉದ್ಯಮಶೀಲರಿಗೆ ಪ್ರೋತ್ಸಾಹ
- ಸ್ವಯಂ ದೃಢೀಕರಣ ಸಾಕು
- ಸಾಲ ಮರುಪಾವತಿಗೆ 7 ವರ್ಷಗಳ ಅವಕಾಶ
- 3 ವರ್ಷಗಳ ಆದಾಯ ತೆರಿಗೆ ವಿನಾಯಿತಿ

ಸೌಹಾರ್ದ ಸಹಕಾರಿಗಳ ಸಂಖ್ಯೆ : 3500 ‘ಇ’ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 881



# ಕೌಶಲ್ಯ ಅಭಿವೃದ್ಧಿಯಿಂದ (Skill Development) ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿ

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿ ಬಂಧುಗಳಿಗೆ ನಮಸ್ಕಾರಗಳು.

ವರ್ಷ 2016 ಪ್ರಾರಂಭವಾಗಿ ಒಂದು ತಿಂಗಳು ಕಳೆದಿದೆ. 2015-16ನೇ ಸಾಲಿನ ಕ್ರಿಯಾಯೋಜನೆಗಳ ಅನುಷ್ಠಾನದ ಪರಾಮರ್ಶೆಯಾಗಿ ಅನುಷ್ಠಾನವಾಗದಿರುವ ಕಾರ್ಯಗಳನ್ನು ಪೂರ್ಣಗೊಳಿಸುವ ಬಗ್ಗೆ ಚಿಂತಿಸುವ ಕಾಲ. ಜೊತೆಗೆ ಕೆಲವು ಸೌಹಾರ್ದ ಸಹಕಾರಿಗಳಿಗೆ ಈ ವರ್ಷ ಚುನಾವಣಾ ವರ್ಷ. ಕಾನೂನು ಬದ್ಧ ಚುನಾವಣೆ ನಡೆಸಿ ಹೊಸ ಆಡಳಿತ ಮಂಡಲಿ ಅಧಿಕಾರ ವಹಿಸಿಕೊಳ್ಳುವ ಪರ್ವಕಾಲ. ನೂತನ ಆಡಳಿತ ಮಂಡಲಿ ಅಧಿಕಾರ ವಹಿಸಿಕೊಳ್ಳುವ ಸಂದರ್ಭದಲ್ಲಿ ತಮ್ಮ ಸಹಕಾರಿ ನಡೆದು ಬಂದ ದಾರಿಯ ಅವಲೋಕನ ಮಾಡಿ ಮುಂಬರುವ ದಿನಗಳಲ್ಲಿ ಜಾರಿ ಮಾಡಬಹುದಾದ ಕ್ರಿಯಾಯೋಜನೆಯ ಬಗ್ಗೆ ಆಲೋಚನೆ ಮಾಡುವುದು. ಒಟ್ಟಾರೆ ಸಹಕಾರಿಯ ಸರ್ವತೋಮುಖ ಅಭಿವೃದ್ಧಿಯ ಗುರಿ ಹೊಂದುವುದು ಅವಶ್ಯಕ.

ಬದಲಾವಣೆ ಜಗದ ನಿಯಮ. ಬದಲಾವಣೆಗೆ ಹೊಂದದ ವ್ಯಕ್ತಿ, ಸಂಸ್ಥೆ ಅಥವಾ ಸರಕಾರಗಳು ಅಭಿವೃದ್ಧಿಯನ್ನು ಸಾಧಿಸಲಾರವು. ಬದಲಿಗೆ ಅಸ್ತಿತ್ವವನ್ನು ಕಳೆದುಕೊಳ್ಳುವ ಭೀತಿಯನ್ನು ಅನುಭವಿಸಬೇಕಾಗುತ್ತದೆ. ಆದ್ದರಿಂದ, ಬದಲಾವಣೆಗೆ ಹೊಂದಿಕೊಳ್ಳುವುದು ಅವಶ್ಯಕ.

ಉದಾರೀಕರಣ, ಜಾಗತೀಕರಣ ಹಾಗೂ ಖಾಸಗೀಕರಣ ನೀತಿಗಳು ವಿಶ್ವದ ವ್ಯವಸ್ಥೆಯಾಗಿರುವಾಗ ಸಹಕಾರಿ ಸಂಸ್ಥೆಗಳು ಸಹ ವ್ಯವಸ್ಥೆಯ ಜೊತೆಯಲ್ಲಿ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಜಾಗತಿಕ ಆರ್ಥಿಕ ಹಿನ್ನಡೆಯ ಸಂದರ್ಭದಲ್ಲೂ ಸಹ ಸಹಕಾರಿ ಸಂಸ್ಥೆಗಳು ಹಿನ್ನಡೆಯನ್ನು ಕಂಡಿರುವುದಿಲ್ಲ. ಸಹಕಾರ ಸಂಸ್ಥೆಗಳು ಉತ್ತಮ ರಾಷ್ಟ್ರವನ್ನು ನಿರ್ಮಾಣ ಮಾಡಬಲ್ಲವು ಮತ್ತು ವಿಪತ್ತಿನಲ್ಲೂ ಉತ್ತಮ ಕಾರ್ಯನಿರ್ವಹಿಸಬಲ್ಲವು ಎಂದು ವಿಶ್ವ ಸಂಸ್ಥೆ ಹಾಗೂ ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯವರ ವರದಿಗಳು ಹೇಳಿವೆ ಮತ್ತು ಈ ಕ್ಷೇತ್ರವನ್ನು ಬಲಪಡಿಸುವ ಪ್ರಯತ್ನ ನಿರಂತರವಾಗಿ ನಡೆಯಬೇಕು ಎಂದು ಹೇಳಿರುವಾಗ ಸಹಕಾರಿ ಸಂಸ್ಥೆಗಳು ಹೆಚ್ಚು ಕೌಶಲ್ಯತೆಯನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸಿದಾಗ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಾಧ್ಯ ಎಂಬುದು ಸಹಕಾರಿಗಳ ಹಾಗೂ ತಜ್ಞರ ಅಭಿಪ್ರಾಯ.

ಕೌಶಲ್ಯ ಅಭಿವೃದ್ಧಿ ಎಂದರೆ ಮಾಡಬೇಕಿರುವ ಯಾವುದೇ ಕೆಲಸವನ್ನು ನಿಗದಿತ ಸಮಯದಲ್ಲಿ ಅಚ್ಚುಕಟ್ಟಾಗಿ ಸ್ವಲ್ಪವೂ ಲೋಪವಾಗದಂತೆ ಎಚ್ಚರವಹಿಸಿ ಆಕರ್ಷಕವಾಗಿ ಇನ್ನೊಬ್ಬರಿಗೆ ಮಾದರಿ ಎನಿಸುವಂತೆ ಮಾಡುವುದು. ಕೆಲಸ ನಿರ್ವಹಿಸುವಾಗ ಕಾನೂನಿನ ವ್ಯಾಪ್ತಿ, ಪ್ರಚಲಿತ ನೀತಿ ನಿಯಮಗಳ ವ್ಯಾಪ್ತಿ, ತಾಂತ್ರಿಕತೆಯ ಅಳವಡಿಸುವಿಕೆ ಇತ್ಯಾದಿಗಳನ್ನು ಗಮನಿಸುವುದು ಮತ್ತು ಮಾಡಿರುವ ಕೆಲಸವನ್ನು ಆಕರ್ಷಕ ರೀತಿಯಲ್ಲಿ ಸಾರ್ವಜನಿಕರ ಹಾಗೂ ಸದಸ್ಯರ ಗಮನ ಸೆಳೆಯುವಂತೆ ಮಾಡುವುದು ಇವೆಲ್ಲವುಗಳನ್ನು ಅಳವಡಿಸಿ ಕಾರ್ಯನಿರ್ವಹಿಸುವ ಅನೇಕ ಸಹಕಾರಿ ಸಂಸ್ಥೆಗಳಿವೆ, ಆಡಳಿತ ಮಂಡಲಿಯವರಿದ್ದಾರೆ, ಮುಖ್ಯ ಕಾರ್ಯನಿರ್ವಾಹಕರು ಹಾಗೂ ಅಧಿಕಾರಿಗಳಿದ್ದಾರೆ, ಅವರೆಲ್ಲರನ್ನು ಅಭಿನಂದಿಸಿ, ಅವರ ಹಾದಿಯಲ್ಲಿ ನಾವುಗಳು ನಡೆಯುವುದು ಅವಶ್ಯಕ.

ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿ ದೃಷ್ಟಿಯಿಂದ ಅವಶ್ಯಕ ಕೌಶಲ್ಯ ಅಭಿವೃದ್ಧಿಯನ್ನು ರೂಢಿಸಿಕೊಳ್ಳುವುದು, ಕಾರ್ಯನಿರ್ವಹಣೆಯಲ್ಲಿ ವೈವಿಧ್ಯತೆಯನ್ನು ತರುವುದು ಅಪೇಕ್ಷಿತವಾಗಿದೆ. ಸೌಹಾರ್ದ ಸಹಕಾರಿಗಳ ಕಾರ್ಯವೈಖರಿಯಲ್ಲಿ ಇತರೆ ಸಹಕಾರಿ ಸಂಸ್ಥೆಗಳಿಗಿಂತ ಭಿನ್ನವಾಗಿರಲಿ, ವೈಶಿಷ್ಟ್ಯತೆಗಳಿಂದ ಕೂಡಿರಲಿ, ರಾಜ್ಯದ 3500ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ಈ ಬಗ್ಗೆ ಗಮನ ಹರಿಸಲಿ ಎಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆ.

**ಗುರುನಾಥ ಜಾಂತಿಕರ,** ಅಧ್ಯಕ್ಷರು

“ ಕೌಶಲ್ಯ ಅಭಿವೃದ್ಧಿ ಎಂದರೆ ಮಾಡಬೇಕಿರುವ ಯಾವುದೇ ಕೆಲಸವನ್ನು ನಿಗದಿತ ಸಮಯದಲ್ಲಿ ಅಚ್ಚುಕಟ್ಟಾಗಿ ಸ್ವಲ್ಪವೂ ಲೋಪವಾಗದಂತೆ ಎಚ್ಚರವಹಿಸಿ ಆಕರ್ಷಕವಾಗಿ ಇನ್ನೊಬ್ಬರಿಗೆ ಮಾದರಿ ಎನಿಸುವಂತೆ ಮಾಡುವುದು. ಕೆಲಸ ನಿರ್ವಹಿಸುವಾಗ ಕಾನೂನಿನ ವ್ಯಾಪ್ತಿ, ಪ್ರಚಲಿತ ನೀತಿ ನಿಯಮಗಳ ವ್ಯಾಪ್ತಿ, ತಾಂತ್ರಿಕತೆಯ ಅಳವಡಿಸುವಿಕೆ ಇತ್ಯಾದಿಗಳನ್ನು ಗಮನಿಸುವುದು ಮತ್ತು ಮಾಡಿರುವ ಕೆಲಸವನ್ನು ಆಕರ್ಷಕ ರೀತಿಯಲ್ಲಿ ಸಾರ್ವಜನಿಕರ ಹಾಗೂ ಸದಸ್ಯರ ಗಮನ ಸೆಳೆಯುವಂತೆ ಮಾಡುವುದು ”

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಗುರುನಾಥ ಜಾಂತಿಕರ
ಗೌರವ ಅಧ್ಯಕ್ಷರು

ಶ್ರೀ ಹೆಚ್.ವಿ.ರಾಜೀವ
ಗೌರವ ಉಪಾಧ್ಯಕ್ಷರು

ಶ್ರೀ ಎಸ್.ಆರ್.ಸತೀಶಚಂದ್ರ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜೆ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

## ಒಳ ಪುಟಗಳಲ್ಲಿ . . .

ಸ್ಟಾರ್ಟ್ ಅಪ್ ಇಂಡಿಯಾ ........................................ 5

2016ನೇ ಸಾಲಿನ ಪದ್ಮ ಪ್ರಶಸ್ತಿ ಪುರಸ್ಕೃತರು .................. ........................................................................ 6

ಜನವರಿ 2016ರಲ್ಲಿ ಸಂಯುಕ್ತ ಸಹಕಾರಿಯ ಶಾಸನಬದ್ಧ ಕಾರ್ಯಚಟುವಟಿಕೆಗಳು ........................................ 15

ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ವಿಭಾಗೀಯ ಕಛೇರಿಗಳಲ್ಲಿ ಹಾಗೂ ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ 67ನೇ ಗಣರಾಜ್ಯೋತ್ಸವ ಆಚರಣೆ .... 17

ರಾಜ್ಯದ ವಿವಿಧ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ........................................ 18

ನಿಮ್ಮ ಪ್ರಶ್ನೆ ನಮ್ಮ ಉತ್ತರ .................................... 24

ಸಹಕಾರಿ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿಯ ಅಗತ್ಯತೆ .... 27

# ಸಂಪಾದಕೀಯ

## ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಗಳು - ಅಧಿಕಾರಿಗಳು ಗಮನಿಸಿದ ಪ್ರಮುಖ ಅಂಶಗಳು

## ಮುಖ್ಯ ಕಾರ್ಯನಿರ್ವಾಹಕರು ಕಾರ್ಯಪರಿಣಿತಿ ಸಾಧಿಸಲಿ ಎಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆ

ಕಳೆದ ಡಿಸೆಂಬರ್ 2015ರಲ್ಲಿ ರಾಜ್ಯದಾದ್ಯಂತ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ಸಭೆಗಳು ನಡೆದಿವೆ. ಮುಖ್ಯ ಕಾರ್ಯನಿರ್ವಾಹಕರ ಹಾಜರಾತಿ ಹಾಗೂ ಅವರ ಜವಾಬ್ದಾರಿಯುತ ಕಾರ್ಯನಿರ್ವಹಣೆ, ಭಾಗವಹಿಸುವಿಕೆ ತೃಪ್ತಿ ತಂದಿದೆ ಎಂಬುದರ ಬಗ್ಗೆ ಉಲ್ಲೇಖಿಸಲಾಗಿತಾಗೀ, ಸಭೆಗಳಲ್ಲಿ ಭಾಗವಹಿಸಿದ ಸಂಯುಕ್ತ ಸಹಕಾರಿಯ ಅಧಿಕಾರಿಗಳು ಮುಖ್ಯಕಾರ್ಯನಿರ್ವಾಹಕರಲ್ಲಿ ಕೆಲವು ಅಂಶಗಳನ್ನು ಗಮನಿಸಿದ್ದಾರೆ. ಅವುಗಳು ಸುಧಾರಿಸಿಕೊಳ್ಳಬೇಕಾದ ವಿಷಯಗಳು. ಅವುಗಳ ಬಗ್ಗೆ ಮುಖ್ಯ ಕಾರ್ಯನಿರ್ವಾಹಕರು ಗಮನ ಹರಿಸುವುದು ಅಗತ್ಯ.

ಕೆಲವು ಮುಖ್ಯ ಕಾರ್ಯನಿರ್ವಾಹಕರಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯ ಹಾಗೂ ನಿಯಮಗಳನ್ನು ಮತ್ತು ಸೌಹಾರ್ದ ಸಹಕಾರಿಗಳ ಉಪವಿಧಿಗಳನ್ನು ತಿಳಿದುಕೊಂಡಿರುವ, ಮುಖ್ಯ ಕಾರ್ಯನಿರ್ವಾಹಕರ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ನಿರ್ವಹಿಸುವ ಬಗ್ಗೆ ಮಾಹಿತಿ ಕಡಿಮೆ. ಲೆಕ್ಕಪತ್ರಗಳ ನಿರ್ವಹಣೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಪರಿಪಾಠ ಕಡಿಮೆ. ಅಂದಿನ ಲೆಕ್ಕಪತ್ರಗಳ ವ್ಯವಹಾರಗಳನ್ನು ಅಂದೇ ಮಾಡಿ ಮುಗಿಸುವ ಕ್ರಮ ಅಗತ್ಯ. ಆಧುನಿಕ ತಂತ್ರಜ್ಞಾನ ಬಳಸಿ, ಲೆಕ್ಕ ಪತ್ರಗಳ ನಿರ್ವಹಣೆ ಮಾಡದಿರುವುದು, ವೃತ್ತಿ ಸಂಸ್ಕೃತಿಯನ್ನು ಮತ್ತು ವೃತ್ತಿಪರತೆಯನ್ನು ರೂಢಿಸಿಕೊಳ್ಳದಿರುವುದು ಮತ್ತು ಮುಖ್ಯ ಕಾರ್ಯನಿರ್ವಾಹಕರುಗಳು ಆಸಕ್ತಿಯಿಂದ ಮುಂದೆ ಬಂದು ಕಾರ್ಯನಿರ್ವಹಿಸುವ ಅವಕಾಶಗಳನ್ನುಸದುಪಯೋಗಪಡಿಸದಿರುವುದು,ತಮ್ಮಕರ್ತವ್ಯಹಾಗೂಜವಾಬ್ದಾರಿಗಳನ್ನು ಇನ್ನೊಬ್ಬ ಅಧಿಕಾರಿಗೆ ವಹಿಸಿಕೊಡುವ ಅಧಿಕಾರ ವಿಕೇಂದ್ರೀಕರಣವಿಲ್ಲದಿರುವುದು ಕಂಡುಬಂದಿರುತ್ತದೆ. ಈ ಬಗ್ಗೆ ಮುಖ್ಯ ಕಾರ್ಯನಿರ್ವಾಹಕರುಗಳಲ್ಲಿ ವಿಷಯ ಜ್ಞಾನ ಹಾಗೂ ಪರಿಣಿತಿ ಇನ್ನೂ ಬೇಕು ಎನಿಸುತ್ತದೆ.

ಸಂಯುಕ್ತ ಸಹಕಾರಿ ಹಲವು ವಿಧವಾದ ತರಬೇತಿ ಶಿಬಿರಗಳನ್ನು ರಾಜ್ಯದಾದ್ಯಂತ ಹಮ್ಮಿಕೊಳ್ಳುತ್ತಿದೆ. ಈ ತರಬೇತಿ ಶಿಬಿರಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದರ ಜೊತೆಗೆ ನಿಮಗೆ ತರಬೇತಿ ಬೇಕಿರುವ ಬೇರೆ ವಿಷಯಗಳ ಬಗ್ಗೆ ಸಲಹೆ ನೀಡಿದಲ್ಲಿ ಸಂಯುಕ್ತ ಸಹಕಾರಿಗೆ ತಿಳಿಸಬೇಕು. ವಿಷಯ ತಿಳಿದುಕೊಳ್ಳುವಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದುವುದು ಅಗತ್ಯ. ಇಡೀ ದೇಶದಲ್ಲಿ ಮಾದರಿ ಎನಿಸಿರುವ ಸಂಯುಕ್ತ ಸಹಕಾರಿಯ ಕಾರ್ಯನಿರ್ವಹಣೆ ಹಾಗೂ ಸೌಹಾರ್ದ ಸಹಕಾರಿಗಳ ಚಟುವಟಿಕೆಗಳು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ನಡೆಯುವಂತಾಗಬೇಕು. ಈ ನಿಟ್ಟಿನಲ್ಲಿ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಕಾರ್ಯ ನಿರ್ವಹಿಸಬೇಕು ಎಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆ. ■

## ಭಕ್ತಿ ರಸ

'ಸತೋ ಅಸ್ಮಿನ್ ಪರಮ ಪ್ರೇಮ ರೂಪಃ, ಅಮೃತ ಸ್ವರೂಪಾಚೆ' ಇದು ಭಕ್ತಿಯನ್ನು ಕುರಿತು ಹೇಳಿದ ಎರಡು ಸೂತ್ರಗಳು. ಭಾರತ ದೇಶದಲ್ಲಿ ಉಪನಿಷತ್ತಿನಂತಹ ಬಹಳ ಪವಿತ್ರವಾದ ಆಧ್ಯಾತ್ಮಿಕ ಗ್ರಂಥಗಳಿವೆ. ಸಾವಿರಾರು ವರ್ಷಗಳ ಹಿಂದೆ ಋಷಿಗಳ ಮುಖದಿಂದ ಹೊರಹೊಮ್ಮಿದವು. ಅವುಗಳಲ್ಲಿ ಅತ್ಯಂತ ಪವಿತ್ರವಾದ ಜ್ಞಾನವಿದೆ. ಆ ಉಪನಿಷತ್ತುಗಳನ್ನು ಬಹುಜನರು, ಚಿಂತಕರು, ಸಾಧುಗಳು, ತತ್ವಜ್ಞಾನಿಗಳು ಮೆಚ್ಚಿ ಕೊಂಡಿದ್ದಾರೆ. ಭಾರತ ದೇಶ ಮನುಕುಲಕ್ಕೆ ಕೊಟ್ಟ ಶ್ರೇಷ್ಠ ಪವಿತ್ರ ಗ್ರಂಥಗಳು ಸಣ್ಣ ಹೊತ್ತಿಗೆ ಅವು. ಎಷ್ಟು ಚಿಕ್ಕವು ಎಂದರೆ ಐದು ನಿಮಿಷಕ್ಕೆ ಓದಿ ಮುಗಿಸಬಹುದು. ಇದಕ್ಕೂ ಚಿಕ್ಕ ಉಪನಿಷತ್ತುಗಳಿವೆ. ಅವು ಹತ್ತು ಹದಿನೈದು ಮಾತುಗಳಷ್ಟೇ. ಅವುಗಳಲ್ಲಿ ಬದುಕನ್ನು ಸಮೃದ್ಧಗೊಳಿಸುವ ಮಾತುಗಳು ತುಂಬಿವೆ. ಭಾರತ ಹೆಮ್ಮೆ ಪಡುವಂತಹವು. ಎರಡು ನೂರನ್ನೂ ಮೀರಿ ಉಪನಿಷತ್ತುಗಳಿವೆ.




ಯಾವುದು ಸಣ್ಣದು, ಯಾವುದು ಅಲ್ಪವಿದೆ ಅದು ಮರ್ತ್ಯ. ಅಲ್ಪಂ ಮರ್ತ್ಯ. ಇದನ್ನು ಮರೆಯುತ್ತೇವೆ. 'ಅಹಂ' ತುಂಬುತ್ತದೆ. ಅದು ಸಂಸಾರ. ನಮಗೆ ಎಷ್ಟೇ ಶಕ್ತಿ ಇರಬಹುದು, ಅಧಿಕಾರ ಇರಬಹುದು, ಬುದ್ಧಿ ಇರಬಹುದು. ಇದನ್ನು ಬಿಟ್ಟು ಬೇರೆ ಇರಬಹುದಲ್ಲ! ನಮ್ಮ ವಿದ್ಯೆ, ಬುದ್ಧಿ, ಶಕ್ತಿ, ಸಾಮರ್ಥ್ಯ, ಅಧಿಕಾರದ ಬಗ್ಗೆ ಪ್ರೀತಿ ಇರಬೇಕು. ಆದರೆ ಎಲ್ಲಕ್ಕೂ ಕಾಲ ಮಿತಿ ಇದೆ. ನಂತರ ಬೇರೆ. ನಮ್ಮ ವಿದ್ಯೆ, ಬುದ್ಧಿ, ಶಕ್ತಿ, ಸಾಮರ್ಥ್ಯ, ಅಧಿಕಾರದ ಬಗ್ಗೆ ಪ್ರೀತಿ ಇರಬೇಕು, ಹೆಮ್ಮೆ ಇರಬೇಕು. ಅದು ಅತಿಯಾಗಬಾರದು. ರೋಗ ಆಗಬಾರದು. ಆಗ ಅದು ದುಃಖಕ್ಕೆ ಕಾರಣ ಆಗುವುದಿಲ್ಲ. ನಮ್ಮನ್ನು ಬಿಟ್ಟು ದೊಡ್ಡದು ಇದೆ ಅನ್ನುವುದು ಗೊತ್ತಿರಬೇಕು. ಜೊತೆಗೆ ಈಗ ನನ್ನಲ್ಲಿ ಇರೋದು ಖಾಯಂ ಇರೋದಿಲ್ಲ ಅನ್ನುವುದೂ ತಿಳಿದಿರಬೇಕು.

ನಾವು ಕುರ್ಚಿ ಮೇಲೆ ಕುಳಿತಾಗ ಏನೋ ಒಂದು ರೀತಿ ಅನಿಸುತ್ತದೆ. ನನಗಷ್ಟೇ ಅಲ್ಲ ಎಲ್ಲರಿಗೂ ಹಾಗೇ ಅನಿಸುತ್ತದೆ. ಆದರೆ ಕುರ್ಚಿ ನಮಗೇನು ಖಾಯಂ ಅಲ್ಲವಲ್ಲ. ಕುರ್ಚಿ ಹೇಳುತ್ತದೆ ನಾನು ಖಾಯಂ ಯಾರನ್ನೂ ಕೂರಿಸುವುದಿಲ್ಲ, ನೂರಾರು ಜನ ಸಾಮ್ರಾಟರು ಬಂದು ಹೋಗಿದ್ದಾರೆ. ಒಂದು ತಿಳಿದಿರಬೇಕು ನಮ್ಮ ಶಕ್ತಿ, ವಿದ್ಯೆ, ಬುದ್ಧಿ, ಅಧಿಕಾರ ಇವುಗಳಿಗೆ ಕಡಿಮೆ ಆಯುಷ್ಯ ಎಂದು. ಅವು ಅಲ್ಪಂ, ಮರೆಯಾಗುತ್ತವೆ. 'ಅಹಂ' ಇರಬೇಕು, ಕಡಿಮೆ ಇರಬೇಕು, ಕುರೂಪ ಆಗಬಾರದು. ಆದರೆ ಒಮ್ಮೊಮ್ಮೆ ಹಾಗೆ ಆಗುತ್ತದೆ. ನಮ್ಮ ಮನೆಯಂತೆ ಯಾರದು ಇದೆ? ಎಂದು ಬೀಗುತ್ತೇವೆ. ಅದು ಬಾಡಿಗೆ ಮನೆಯಲ್ಲಿದ್ದು! ಮನೆ ಹೇಳುತ್ತದೆ. ನೀನು ಜಗತ್ತನ್ನು ನೋಡಿಲ್ಲ. ಏನು ಬೆಟ್ಟಗಳು, ಏನು ವಿಶಾಲವಾದ ಸಾಗರಗಳು? ಎಲ್ಲಿ ನಿನ್ನ ಮನೆ? ಮನೆ ಕಟ್ಟಬೇಕು, ಸುಂದರವಾಗಿ ಕಟ್ಟಬೇಕು, ಅಹಂ ಇರಬೇಕು, ವಿಕಾರ ಆಗಿರಬಾರದು.

ಮನುಷ್ಯ ಭಕ್ತಿಯನ್ನು ಮಾಡಬೇಕು, ಭಕ್ತಿರಸವನ್ನು ಕುಡಿಯಬೇಕು. ಏನೇನೋ ಕುಡಿಯುತ್ತೇವೆ. ನೋವು ಮರೆಯೋಕೆ ಕುಡಿಯುತ್ತೇವೆ. ಮನಸ್ಸಿನ ಸ್ಥಿಮಿತ ಕಳೆದುಕೊಂಡು ಕುಡಿಯುತ್ತೇವೆ. ಅದರ ಮೇಲೂ ಅಮೃತ ಎಂದು ಬರೆದಿರುತ್ತದೆ. ಏನೇನೋ ಕುಡಿಯೋ ಬದಲು ಅಮೃತತ್ವದ ಭಕ್ತಿಯ ರಸ ಕುಡಿಯಬೇಕು. ಭಕ್ತಿರಸವನ್ನು ಕುಡಿದವರು ದೊಡ್ಡವರಾದರು. ಅನೇಕ ಸಂತರು, ಸತ್ಪುರುಷರು, ದಾಸರು ಇವರು ಅಮೃತವಾದರು. ಇದು ಸುಂದರವಾದ ಅಮೃತ.




## ಗಣ್ಯರ ಭೇಟಿ

ಬೀದರ್ ಜಿಲ್ಲೆಯ ಔರಾದ್ ಶಾಸಕರಾದ ಶ್ರೀ ಪ್ರಭು ಚೌಹಾಣ್‌ರವರು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅವರನ್ನು ಗೌರವಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಗುರುನಾಥ ಜಾಂತಿಕರ, ಶ್ರೀ ವಸಂತ ನಾಯ್ಕ, ಶ್ರೀ ಎಂ.ಎಸ್. ವೆಂಕಟೇಶ್, ಶ್ರೀ ಬಿ.ಎಸ್.ಸುಲ್ತಾನಪೂರೆ ಹಾಗೂ ಶ್ರೀ ಶರಣಗೌಡ ಜಿ. ಪಾಟೀಲರವರು ಉಪಸ್ಥಿತರಿದ್ದರು.

# ಸ್ಟಾರ್ಟ್ ಅಪ್ ಇಂಡಿಯಾ

## ಪ್ರಧಾನ ಮಂತ್ರಿ ಮೋದಿಯವರಿಂದ ಕ್ರಿಯಾ ಯೋಜನೆ ಬಿಡುಗಡೆ




ದೇಶದಲ್ಲಿ ಸ್ಥಳೀಯ ಮಟ್ಟದಲ್ಲಿ ಉದ್ಯಮವನ್ನು ಸ್ಥಾಪಿಸುವವರಿಗೆ ಉತ್ತೇಜನ ನೀಡುವ ಸಲುವಾಗಿ ಕೇಂದ್ರ ಸರ್ಕಾರವು ಸ್ಟಾರ್ಟ್ ಅಪ್ ಇಂಡಿಯಾ ಯೋಜನೆಗೆ ದಿನಾಂಕ 16 ಜನವರಿ 2016ರಂದು ಚಾಲನೆ ನೀಡಿದೆ. ಯುವಜನತೆ ಕೌಶಲ್ಯಗಳನ್ನು ಹೊಂದಿದ್ದರೂ ಅವರಿಗೆ ಸರಿಯಾದ ಮಾರ್ಗದರ್ಶನ, ನೆರವು ಸಿಗದ ಕಾರಣ ಅವರಲ್ಲಿರುವ ಕೌಶಲ್ಯ ಸದ್ಬಳಕೆಯಾಗುತ್ತಿಲ್ಲ.

ಈ ಕೌಶಲ್ಯವನ್ನು ಸದ್ಬಳಕೆ ಮಾಡಲೆಂದೇ ಕೇಂದ್ರ ಸರ್ಕಾರವು ಆರಂಭಿಸಿರುವ ವಿನೂತನ ಅಭಿಯಾನವೇ ಸ್ಟಾರ್ಟ್ ಅಪ್ ಇಂಡಿಯಾ. ಈ ಯೋಜನೆಯ ಮೂಲಕ ದೇಶದ ಉತ್ಸಾಹಿ ಯುವ ಉದ್ಯಮಶೀಲರಿಗೆ ಪ್ರೋತ್ಸಾಹಿಸಿ, ಅವರಲ್ಲಿನ ಐಡಿಯಾಗಳನ್ನು ಸರ್ಕಾರದ ನೆರವಿನಿಂದ ಕಾರ್ಯರೂಪಕ್ಕೆ ತರುವುದು ಇದರ ಉದ್ದೇಶ. ಸೌಹಾರ್ದ ಸಹಕಾರಿಗಳು ಈ ಯೋಜನೆಯ ಬಗ್ಗೆ ತಮ್ಮ ಸದಸ್ಯರಲ್ಲಿ ಹಾಗೂ ಯುವಜನತೆಯಲ್ಲಿ ಜಾಗೃತಿ ಮೂಡಿಸುವ ಮೂಲಕ ಸಾಮಾಜಿಕ ಕಳಕಳಿಯ ಭಾಗವಾಗಿ ಸಾಮಾಜಿಕ ಅಭಿವೃದ್ಧಿಯ ಪಾಲುದಾರರಾಗಲು ಸದಾವಕಾಶ.

ತಂತ್ರಜ್ಞಾನದ ಸದ್ಬಳಕೆಯಿಂದ ಸೇವಾ ಆಧಾರಿತ ಯೋಜನೆಯನ್ನು ಸಿದ್ಧಪಡಿಸಿ ಅದನ್ನು ಜನ ಬಳಕೆಗೆ ಮುಕ್ತಗೊಳಿಸಿ ಆರ್ಥಿಕ ವಹಿವಾಟು ನಡೆಸುವ ಕ್ರಮಬದ್ಧ ಪ್ರಕ್ರಿಯೆಯೇ ಸ್ಟಾರ್ಟ್‌ಅಪ್. ಆನ್‌ಲೈನ್‌ನಲ್ಲಿ ವಸ್ತುಗಳ ಮಾರಾಟಕ್ಕೆ ಸಿದ್ಧವಾಗುವ ಮೊಬೈಲ್ ಅಪ್ಲಿಕೇಶನ್ ಕೂಡ ಒಂದು ಸ್ಟಾರ್ಟ್‌ಅಪ್ ಎಂದು ಕರೆಯಿಸಿಕೊಳ್ಳುತ್ತದೆ. ಸ್ಟಾರ್ಟ್ ಅಪ್‌ಗಳಿಗೆ ಮೂರು ವರ್ಷಗಳವರೆಗೆ ಆದಾಯ ತೆರಿಗೆ ಇರುವುದಿಲ್ಲ. ಅಷ್ಟೇ ಅಲ್ಲದೇ 3 ವರ್ಷಗಳ ಕಾಲ ಸರ್ಕಾರಿ ಪರಿಶೀಲನೆ ಇರುವುದಿಲ್ಲ. ಪೇಟೆಂಟ್, ವಿನ್ಯಾಸ, ಟ್ರೇಡ್ ಮಾರ್ಕ್ಸ್ ಶುಲ್ಕ ಶೇ.80ರಷ್ಟು ಕಡಿತಗೊಂಡಿದ್ದು, ಸ್ವಯಂ ದೃಢೀಕರಣ ಇದ್ದರೆ ಈ ಯೋಜನೆಗೆ ಸಾಕಾಗುತ್ತದೆ. ಕೇಂದ್ರ ಸರ್ಕಾರ ಈ ಯೋಜನೆಗೆ 10 ಸಾವಿರ ಕೋಟಿ ರೂ.ಗಳ ನಿಧಿಯನ್ನು ಮೀಸಲಿಟ್ಟಿದೆ. ಪರಿಶಿಷ್ಟ ಜಾತಿ/ ಪಂಗಡದ ಸದಸ್ಯರಿಗೆ ಮತ್ತು ಮಹಿಳೆಯರಿಗೆ ಉದ್ಯಮವನ್ನು ಆರಂಭಿಸಲು ಉತ್ತೇಜನ ನೀಡುವ ಸಲುವಾಗಿ ಬ್ಯಾಂಕ್‌ಗಳಿಂದ ಸಾಲವನ್ನು ನೀಡುತ್ತದೆ. ಈ ಸಾಲವನ್ನು ಪಾವತಿ ಮಾಡಲು 7 ವರ್ಷದವರೆಗೆ ಸಮಯಾವಕಾಶವನ್ನು ನೀಡುತ್ತದೆ.

## "ಇ-ಸ್ಟ್ಯಾಂಪಿಂಗ್ ಛಾಪಾಕಾಗದ ಹೊಸ ಮಾದರಿ"




INDIA NON JUDICIAL
Government of Karnataka
e-Stamp

| | |
|---|---|
| Certificate No. | : IN-KA29883344479702I |
| Certificate Issued Date | : 09-Oct-2010 09:11 PM |
| Account Reference | : NONACC (FI)/ kakalo08/ SG PALYA/ KA-BA |
| Unique Doc. Reference | : SUBIN-KAKAKSFCL08498373030798241 |
| Purchased by | : MATHRUBHOOMI VIVIDODDESHA SOUHARDA SAHAKARI NIMAN |
| Description of Document | : Article 12 Bond |
| Description | : AGREEMENT |
| Consideration Price (Rs.) | : 0 (Zero) |
| First Party | : KARNATAKA STATE SOUHARDA FEDERAL CO OP LTD |
| Second Party | : MATHRUBHOOMI VIVIDODDESHA SOUHARDA SAHAKARI NIMAN |
| Stamp Duty Paid By | : MATHRUBHOOMI VIVIDODDESHA SOUHARDA SAHAKARI NIMAN |
| Stamp Duty Amount(Rs.) | : 100 (One Hundred only) |

COPY COPY COPY
Please write or type below this line

ಹಳೆಯ ಮಾದರಿ



INDIA NON JUDICIAL
Government of Test State
e-Stamp

| | |
|---|---|
| Certificate No. | : IN-TS00432752700000N |
| Certificate Issued Date | : 23-Dec-2015 02:22 PM |
| Account Reference | : SHCIL (FI)/ testing/ TEST DELHI/ MH-HG |
| Unique Doc. Reference | : SUBIN-TSTESTING00787813815761N |
| Purchased by | : TEST |
| Description of Document | : Article 44(3-a) Partnership- For Testing |
| Property Description | : TESTING FOR WAVE PATRON |
| Consideration Price (Rs.) | : 60,000 (Sixty Thousand only) |
| First Party | : A1 |
| Second Party | : A2 |
| Stamp Duty Paid By | : A2 |
| Stamp Duty Amount(Rs.) | : 999 (Nine Hundred And Ninety Nine only) |

COPY COPY COPY
Please write or type below this line

ಹೊಸ ಮಾದರಿ

ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಶನ್ ನವರು ಇ-ಸ್ಟ್ಯಾಂಪಿಂಗ್ ಕೇಂದ್ರಗಳ ಮೂಲಕ ಮಾರಾಟ ಮಾಡುವ ಇ-ಸ್ಟ್ಯಾಂಪಿಂಗ್ ಛಾಪಾಕಾಗದ ಮಾದರಿಯನ್ನು ಮಾರ್ಪಾಡು ಮಾಡಿ, ಹೆಚ್ಚು ಭದ್ರತೆಯನ್ನು ಅಳವಡಿಸಿ ಹೊಸ ಮಾದರಿಯ ಛಾಪಾ ಕಾಗದವನ್ನು ದಿನಾಂಕ 01.01.2016 ರಿಂದ ಬಿಡುಗಡೆ ಮಾಡಿದ್ದಾರೆ. ಸೌಹಾರ್ದ ಸಹಕಾರಿಗಳು ಗಮನಿಸಲು ಕೋರಿದೆ.

# 2016ನೇ ಸಾಲಿನ ಕರ್ನಾಟಕದ ಪದ್ಮ ಪ್ರಶಸ್ತಿ ಪುರಸ್ಕೃತರು

## ಪದ್ಮ ವಿಭೂಷಣ



**ಶ್ರೀ ಶ್ರೀ ರವಿಶಂಕರ ಗುರೂಜಿ,** ಅಧ್ಯಾತ್ಮ



**ವಾಸುದೇವ ಕಳಕುಂಟೆ ಅತ್ರೆ,** ವಿಜ್ಞಾನ ಮತ್ತು ತಂತ್ರಜ್ಞಾನ

## ಪದ್ಮಶ್ರೀ ಪುರಸ್ಕೃತರು



**ಪ್ರೊ. ದೀಪಂಕರ್ ಚಟರ್ಜಿ,** ವಿಜ್ಞಾನ



**ಡಾ. ಮೈಲಸ್ವಾಮಿ ಅಣ್ಣಾದೊರೈ,** ವಿಜ್ಞಾನ



**ಮಧು ಪಂಡಿತ ದಾಸ,** ಸಮಾಜ ಸೇವೆ



**ಎಸ್.ಎಲ್.ಭೈರಪ್ಪ,** ಸಾಹಿತ್ಯ



**ಡಾ. ಎಂ.ಎಂ.ಜೋಶಿ,** ನೇತ್ರತಜ್ಞ



**ವೆಂಕಟೇಶ್ ಕುಮಾರ್,** ಸಂಗೀತ



**ಜಾನ್ ಎಬ್ನೇಜರ್,** ಮೂಳೆ ತಜ್ಞ



**ಪ್ರತಿಭಾ ಪ್ರಹ್ಲಾದ್,** ನೃತ್ಯ



**ರಾಜಮೌಳಿ,** ಸಿನಿಮಾ



**ಡಾ.ಎಚ್.ಆರ್.ನಾಗೇಂದ್ರ,** ಯೋಗ

67ನೇ ಗಣರಾಜ್ಯೋತ್ಸವದ ಸಂದರ್ಭದಲ್ಲಿ, ಕೇಂದ್ರ ಸರ್ಕಾರ ಪದ್ಮ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ಪ್ರಗತಿಪರ ರೈತ ಸುಭಾಷ ಪಾಳೇಕರ, ನಟ ರಜನೀಕಾಂತ್, ಆಟಗಾರ್ತಿ ಸಾನಿಯಾ ಮಿರ್ಜಾ ಸೇರಿದಂತೆ 112 ಮಂದಿ ಈ ಬಾರಿ ಪದ್ಮ ಪ್ರಶಸ್ತಿಗಳಿಗೆ ಪಾತ್ರರಾಗಿದ್ದಾರೆ. ಪುರಸ್ಕೃತರಲ್ಲಿ ಅನಿವಾಸಿ ಭಾರತೀಯರು, ಎಂಜಿನಿಯರ್‌ಗಳು, ಉದ್ಯಮಿಗಳೂ ಸೇರಿದ್ದಾರೆ. ರಿಲಯನ್ಸ್ ಸಂಸ್ಥಾಪಕ ಧೀರೂಭಾಯಿ ಅಂಬಾನಿ (ಮರಣೋತ್ತರ), ಮಾಧ್ಯಮ ಕ್ಷೇತ್ರದ ರಾಮೋಜಿ ರಾವ್ ಅವರಿಗೆ ಪದ್ಮ ವಿಭೂಷಣ ಪ್ರಶಸ್ತಿ ದೊರೆತಿದೆ.

ಜಮ್ಮು ಮತ್ತು ಕಾಶ್ಮೀರದ ಮಾಜಿ ರಾಜ್ಯಪಾಲ ಜಗಮೋಹನ್, ಕ್ಯಾನ್ಸರ್ ತಜ್ಞೆ ಡಾ.ವಿ.ಶಾಂತಾ, ಭರತನಾಟ್ಯ ಕಲಾವಿದೆ ಯಾಮಿನಿ ಕೃಷ್ಣಮೂರ್ತಿ, ಗಾಯಕಿ ಗಿರಿಜಾದೇವಿ, ಭಾರತ ಮೂಲದ ಅಮೆರಿಕದ ಆರ್ಥಿಕ ತಜ್ಞ ಅವಿನಾಶ್ ದೀಕ್ಷಿತ್ ಪದ್ಮವಿಭೂಷಣ ಪುರಸ್ಕೃತರಲ್ಲಿ ಸೇರಿದ್ದಾರೆ.

ನಟ ಅನುಪಮ್ ಖೇರ್, ಗಾಯಕ ಉದಿತ್ ನಾರಾಯಣ, ಮಾಜಿ ಮಹಾ ಲೆಕ್ಕಪರಿಶೋಧಕ ವಿನೋದ್ ರಾಯ್, ಟೈಮ್ಸ್ ಮಾಧ್ಯಮ ಸಮೂಹದ ಇಂದೂ ಜೈನ್, ಕ್ರೀಡಾ ಲೋಕದ ಸಾನಿಯಾ ಮಿರ್ಜಾ, ಸೈನಾ ನೆಹ್ವಾಲ್, ಧಾರ್ಮಿಕ ಮುಖಂಡರಾದ ಸ್ವಾಮಿ ದಯಾನಂದ ಸರಸ್ವತಿ (ಮರಣೋತ್ತರ), ಸ್ವಾಮಿ ತೇಜೋಮಯಾನಂದ, ಮಾಜಿ ರಾಯಭಾರಿ ರಾಬರ್ಟ್ ಬ್ಲಾಕ್‌ವಿಲ್ ಸೇರಿದಂತೆ ಉದ್ಯಮಿ ಪಲ್ಲೋಂಜಿ ಶಾಪೂರ್‌ಜಿ ಮಿಸ್ತ್ರಿ, ಮಾರುತಿ ಸುಜುಕಿ ಅಧ್ಯಕ್ಷ ಆರ್.ಸಿ.ಭಾರ್ಗವ್, ವಾಸ್ತುಶಿಲ್ಪಿ ಹಫೀಜ್ 19 ಮಂದಿಗೆ ಪದ್ಮಭೂಷಣ ಪ್ರಶಸ್ತಿ ನೀಡಲಾಗಿದೆ.

ಮುಂಬೈ ಮೇಲೆ ದಾಳಿ ನಡೆಸಿದ ಉಗ್ರ ಅಜ್ಮಲ್ ಕಸಬ್ ವಿರುದ್ಧ ವಾದ ಮಂಡಿಸಿದ ಹಿರಿಯ ವಕೀಲ ಉಜ್ವಲ್ ನಿಕ್ಕಂ, ನಟ ಅಜಯ್ ದೇವಗನ್, ನಟಿ ಪ್ರಿಯಾಂಕಾ ಚೋಪ್ರಾ, ಬಾಲಿವುಡ್ ನಿರ್ಮಾಪಕ ಮಧುರ್ ಭಂಡಾರ್ಕರ್, ಪ್ರಗತಿಪರ ರೈತ ಸುಭಾಷ ಪಾಳೇಕರ ಅವರಿಗೆ ಪದ್ಮಶ್ರೀ ಪ್ರಶಸ್ತಿ ದೊರೆತಿದೆ. ಈ ಪಟ್ಟಿಯಲ್ಲಿ ಕರ್ನಾಟಕದ ಹಲವು ಗಣ್ಯರು ಇದ್ದಾರೆ.

**ರಾಷ್ಟ್ರದ, ರಾಜ್ಯದ ಎಲ್ಲ ಪದ್ಮ ಪ್ರಶಸ್ತಿ ಪುರಸ್ಕೃತರಿಗೂ ಸಂಯುಕ್ತ ಸಹಕಾರಿಯ ಹಾರ್ದಿಕ ಶುಭಾಶಯಗಳು**

**ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆಯಲ್ಲಿ ಹಿಂದುಳಿದ ವರ್ಗಗಳ ಮೀಸಲಾತಿಗೆ ಸಂಬಂಧಿಸಿದಂತೆ ಉಪವಿಧಿ ತಿದ್ದುಪಡಿಯ ಕುರಿತು ಉಂಟಾಗಿರುವ ಗೊಂದಲಗಳ ನಿವಾರಣೆಗಾಗಿ, ಸಂಯುಕ್ತ ಸಹಕಾರಿಯಿಂದ ಸಹಕಾರ ಚುನಾವಣಾ ಪ್ರಾಧಿಕಾರದ ಆಯುಕ್ತರಿಗೆ ಮನವಿ ಮಾಡಲಾಗಿತ್ತು. ಈ ಕುರಿತು ಸಹಕಾರ ಚುನಾವಣಾ ಪ್ರಾಧಿಕಾರವು ಸಹಕಾರಿಗಳ ನಿಬಂಧಕರಿಗೆ ಪತ್ರ ಬರೆದಿದ್ದು, ಅದನ್ನು ಸಹಕಾರಿಗಳ ಮಾಹಿತಿಗಾಗಿ ಪ್ರಕಟಿಸಿದೆ.**

GOVERNMENT OF KARNATAKA

**ಕರ್ನಾಟಕ ಸರ್ಕಾರ**
**ಸಹಕಾರ ಚುನಾವಣಾ ಪ್ರಾಧಿಕಾರ**

ಸಂಖ್ಯೆ: ಸಚುಪ್ರಾ/ಚುನಾವಣೆ/ಸಹಕಾರಿ/ಆಡಳತ/09/2015-16

3ನೇ ಮಹಡಿ, ಟಿ.ಟಿ.ಎಂ.ಸಿ.ಕಟ್ಟಡ "ಎ"ಬ್ಲಾಕ್,
ಶಾಂತಿನಗರ, ಬೆಂಗಳೂರು-560027
ದಿನಾಂಕ:22.01.2016.

ಇವರಿಗೆ,

ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು

ಮಾನ್ಯರೆ,

ವಿಷಯ:- ಸೌಹಾರ್ದ ಸಹಕಾರಿಗಳ ಆಡಳತ ಮಂಡಲ ಚುನಾವಣೆಗೆ ಹಿಂದುಳದ ವರ್ಗಗಳ ಮೀಸಲಾತಿಗೆ ಸಂಬಂಧಿಸಿದಂತೆ ಉಪವಿಧಿ ತಿದ್ದುಪಡಿ ಕುರಿತು.

ಉಲ್ಲೇಖ ಶ್ರೀ ಶರಣಗೌಡ ಜಿ. ಪಾಟೀಲ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ; ಬೆಂಗಳೂರು ಇವರ ಪತ್ರ ಸಂಖ್ಯೆ: ಕರಾಸೌಸಂಸನಿ/2015-16/1614, ದಿನಾಂಕ:29-12-2015.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಸೌಹಾರ್ದ ಸಹಕಾರಿಗಳ ಚುನಾವಣೆಗೆ ಸಂಬಂಧಿಸಿದಂತೆ ಆಗುತ್ತಿರುವ ಗೊಂದಲವನ್ನು ಈ ಕೆಳಕಂಡ ಅಂಶಗಳನ್ನು ಪ್ರಾಧಿಕಾರಕ್ಕೆ ಸಲ್ಲಿಸಿ ಈ ಬಗ್ಗೆ ಚುನಾವಣೆಯನ್ನು ನಡೆಸಲು ಸೂಚನೆ/ಸುತ್ತೋಲೆ ನೀಡಲು ಕೋರಲಾಗಿದೆ.

1. ಸೌಹಾರ್ದ ಸಹಕಾರಿಗಳ ಆಡಳತ ಮಂಡಲ ಚುನಾವಣೆಗೆ, ಸಂಬಂದಿಸಿದ ಅಧಿಕಾರಿಗಳು ಸಹಕಾರಿ ಉಪವಿಧಿಯಲ್ಲಿ ಸೌಹಾರ್ದ ಸಹಕಾರಿ ನಿಯಮಗಳು 2004 ಕ್ಕೆ ಮಾಡಲಾದ 2015ರ ತಿದ್ದುಪಡಿಯನ್ವಯ ಉಪವಿಧಿಯಲ್ಲಿ ಅವಕಾಶವಿರದ ಕಾರಣ ಚುನಾವಣೆ ನಡೆಸಲು ನಿರಾಕರಿಸುತ್ತಿರುವ ಮತ್ತು ಉಪವಿಧಿ ತಿದ್ದುಪಡಿಗೆ ಸೂಚಿಸುತ್ತಿರುವ ಬಗ್ಗೆ ಸಂಯುಕ್ತ ಸಹಕಾರಿಯ ಗಮನಕ್ಕೆ ಬಂದಿರುತ್ತದೆ.

2. ಹಿಂದುಗಳದ ವರ್ಗಗಳ ಮೀಸಲಾತಿ ಸರದಿಯು ಕರ್ನಾಟಕ ಸೌಹಾರ್ದ ಸಹಕಾರಿಯ ನಿಯಮಗಳು 2004 ಕ್ಕೆ ಜೂನ್-2015ರಿಂದ ಜಾರಿಗೆ ಬಂದಿರುವ ತಿದ್ದುಪಡಿಯಲ್ಲಿ ಹೊಸ ಸೇರ್ಪಡೆಯ ಮೂಲಕ ಸೇರಿಸಲಾಗಿರುತ್ತದೆ. (ನಿಯಮ ಸಂಖ್ಯೆ6ಐ(ಎ)).

3. ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ ಸಂಖ್ಯೆ:3(4)(ಬಿ)ರನ್ವಯ ಸಹಕಾರಿಯು ಅಧಿನಿಯಮ ಮತ್ತು ನಿಯಮಗಳಿಗೆ ಕಾಲಕಾಲಕ್ಕೆ ಮಾಡಲ್ಪಟ್ಟ ತಿದ್ದುಪಡಿಗಳು ಜಾರಿಗೆ ಬರುವ ದಿನಾಂಕದಿಂದ ಮುಂಬರುವ ಮೊದಲನೆ ಸರ್ವಸದಸ್ಯರ ಸಭೆಯಲ್ಲಿ ತನ್ನ ಉಪವಿಧಿಗಳಿಗೆ ತಿದ್ದುಪಡಿ ಮಾಡಿಕೊಳ್ಳಬೇಕಾಗಿರುತ್ತದೆ.

4. ನಿಯಮಗಳಲ್ಲಿ ಹಿಂದುಳದ ವರ್ಗಗಳ ಮೀಸಲಾತಿಯ ಸರದಿ ಕುರಿತು ತಿಳಸಿರುವ ಹಿನ್ನೆಯಲ್ಲಿ ಈ ಕುರಿತು ಸೂಕ್ತ ಪ್ರಾವಧಾನವಿಲ್ಲದಿದ್ದರೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ರಲ್ಲಿ ತಿಳಸಿರುವಂತೆ ಹಿಂದುಳದ ವರ್ಗ ಮತ್ತು ಇತರೆ ಮೀಸಲಾತಿಯಗಳನ್ವಯ ಚುನಾವಣೆಗಳನ್ನು ನಡೆಸಬೇಕಾಗಿರುತ್ತದೆ.

5. ಉಪವಿಧಿಗಳು ತಿದ್ದುಪಡಿಯಾಗದೆ ಚುನಾವಣೆಯನ್ನು ನಡೆಸಲು ರಿಟರ್ನಿಂಗ್ ಅಧಿಕಾರಿಯು ಕ್ರಮಕೈಗೊಳ್ಳದಿರುವುದು ಕಂಡುಬಂದಿರುತ್ತದೆ.

2...

-2-

6. ಉಪವಿಧಿಗಳು ತಿದ್ದುಪಡಿಯಾಗದಿದ್ದರೂ ಸಹ ಕರ್ನಾಟಕ ಸೌಹಾರ್ದ ಸಹಕಾರಿಗಳು 2004ರ ನಿಯಮ 6ಐ(ಎ)ರನ್ವಯ ಆಡಳಿತ ಮಂಡಳಿಗೆ ಚುನಾವಣೆಯನ್ನು ನಡೆಸುವಂತೆ ಸೂಚನೆ / ಸುತ್ತೋಲೆ ನೀಡಲು ಕೋರಲಾಗಿದೆ. (ಉಲ್ಲೇಖಿತ ಪತ್ರದ ಪ್ರತಿ ಲಗತ್ತಿಸಿದೆ.)

ಮೇಲೆ ವಿವರಿಸಿರುವ ಅಂಶಗಳ ಬಗ್ಗೆ ಪರಿಶೀಲಿಸಲಾಗಿ ಸಹಕಾರ ಸಂಘಗಳ ಅಧಿನಿಯಮ ಮತ್ತು ನಿಯಮಗಳನ್ವಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಗಳ ಚುನಾವಣೆಗೆ ಸಂಬಂಧಿಸಿದಂತೆ ಹಿಂದುಳಿದ ವರ್ಗಗಳ ಮೀಸಲಾತಿಗೆ ಸಂಬಂಧಿಸಿದಂತೆ ಉಪವಿಧಿಗಳಿಗೆ ತಿದ್ದುಪಡಿಯನ್ನು ಮಾಡುವ ಅಧಿಕಾರವು ಸಕ್ಷಮ ಕಾರ್ಯವ್ಯಾಪ್ತಿಯ ನಿಬಂಧಕರಿಗೆ ದತ್ತವಾಗಿರುತ್ತದೆ. ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ 2015 ರಂತೆ ಉಪವಿಧಿಗಳಿಗೆ ತಿದ್ದುಪಡಿಗಳನ್ನು ಮಾಡಿಕೊಂಡು ಅದರಂತೆ ಚುನಾವಣೆಗಳನ್ನು ನಡೆಸಬೇಕಾಗಿರುತ್ತದೆ. ಆದರೆ ಚುನಾವಣೆಗೆ ಬಾಕಿ ಇರುವ ಸೌಹಾರ್ದ ಸಹಕಾರಿಗಳ ಚುನಾವಣೆಗಳನ್ನು ನಡೆಸಲು ನೇಮಕಾತಿಗೊಂಡ ರಿಟರ್ನಿಂಗ್ ಆಫೀಸರ್‌ಗಳು ತಿದ್ದುಪಡಿಯಾಗದೆ ಚುನಾವಣೆಗಳನ್ನು ನಡೆಸಲು ನಿರಾಕರಿಸುತ್ತಿರುವುದಾಗಿ ಪ್ರಾಧಿಕಾರದ ಗಮನಕ್ಕೆ ತಂದಿರುತ್ತಾರೆ. ಆದರೆ ಸೌಹಾರ್ದ ಸಹಕಾರಿ ಕಾಯ್ದೆ ಮತ್ತು ನಿಯಮಗಳಿಗೆ 2015ರಲ್ಲಿ ಆಗಿರುವ ತಿದ್ದುಪಡಿಗನುಗುಣವಾಗಿ ಉಪವಿಧಿಗಳನ್ನು ತಿದ್ದುಪಡಿ ಮಾಡುವ ಜವಾಬ್ದಾರಿ ಸಕ್ಷಮ ನಿಬಂಧಕರದ್ದಾಗಿರುತ್ತದೆ. ಆದಕಾರಣ ಸಕಾಲಕ್ಕೆ ಬೈಲಾ ತಿದ್ದುಪಡಿಗಳನ್ನು ಸಂಬಂಧಿಸಿದ ಸಹಕಾರಿಗಳು ಸೌಹಾರ್ದ ಸಹಕಾರಿ ಕಾಯ್ದೆ ಮತ್ತು ನಿಯಮಗಳಿಗನುಗುಣವಾಗಿ ಉಪವಿಧಿಗಳನ್ನು ತಿದ್ದುಪಡಿ ಮಾಡಿಕೊಳ್ಳದಿದ್ದಲ್ಲಿ, ಸೌಹಾರ್ದ ಸಹಕಾರಿ ಅಧಿನಿಯಮ ಮತ್ತು 2015ರ ರಲ್ಲಿ ತಿದ್ದುಪಡಿಯಾಗಿರುವ ನಿಯಮಗಳಂತೆ ಚುನಾವಣೆಗಳನ್ನು ನಡೆಸಲು ಪ್ರಾಧಿಕಾರದಿಂದ/ಚುನಾವಣಾಧಿಕಾರಿಗಳಿಂದ/ ನೇಮಕಾತಿಯಾದ ರಿಟರ್ನಿಂಗ್ ಆಫೀಸರ್‌ಗಳಿಗೆ ಮತ್ತು ಚುನಾವಣಾಧಿಕಾರಿಗಳಿಗೆ ಈ ಬಗ್ಗೆ ಸೂಕ್ತ ನಿರ್ದೇಶನ ನೀಡಬೇಕಾಗಿರುತ್ತದೆ.

ಮೇಲಿನ ಕಂಡಿಕೆಗಳಲ್ಲಿ ವಿವರಿಸಿರುವಂತೆ ಕಾರ್ಯವ್ಯಾಪ್ತಿಯ ಸಕ್ಷಮ ನಿಬಂಧಕರುಗಳು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ಕ್ಕೆ 2015ನೇ ಸಾಲಿನಲ್ಲಿ ತರಲಾದ ತಿದ್ದುಪಡಿಯನ್ವಯ ಉಪವಿಧಿಗಳನ್ನು ತಿದ್ದುಪಡಿ ಮಾಡಿಕೊಂಡು ಸಹಕಾರಿ ಅಧಿನಿಯಮ ಮತ್ತು ನಿಯಮಗಳು ಹಾಗೂ ಸಹಕಾರಿಗಳ ಉಪವಿಧಿಗಳಂತೆ ಚುನಾವಣೆಗಳನ್ನು ಸಕಾಲಕ್ಕೆ ಮತ್ತು ನಿಯಮಾನುಸಾರ ಹಾಗೂ ಪಾರದರ್ಶಕವಾಗಿ ನಡೆಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳತಕ್ಕದ್ದಾಗಿರುತ್ತದೆ. ಆದರೆ 2015ರ ಸೌಹಾರ್ದ ಸಹಕಾರಿ ಕಾಯ್ದೆಯಂತೆ ಬೈಲಾ ತಿದ್ದುಪಡಿ ಮಾಡಿಕೊಳ್ಳದ ಸಹಕಾರಿಗಳಿಗೆ ತಿದ್ದುಪಡಿಯಾಗಿರುವ ನಿಯಮಗಳನ್ವಯ ಚುನಾವಣೆ ನಡೆಸುವ ಬಗ್ಗೆ ಅಗತ್ಯ ಕ್ರಮ ಕೈಗೊಂಡು ನಂತರ ಸರ್ವಸದಸ್ಯರ ಸಭೆಗಳಲ್ಲಿ ಕಾಯ್ದೆಗನುಗುಣವಾಗಿ ಬೈಲಾ ತಿದ್ದುಪಡಿ ಮಾಡಿಕೊಳ್ಳುವ ಬಗ್ಗೆ ತೀರ್ಮಾನಗಳನ್ನು ಮತ್ತು ಸೂಕ್ತ ಪ್ರಸ್ತಾವೆಗಳನ್ನು ಪಡೆದು ಬೈಲಾ ತಿದ್ದುಪಡಿ ಆದೇಶ ಹೊರಡಿಸುವ ಬಗ್ಗೆ ಸಕ್ಷಮ ನಿಬಂಧಕರುಗಳು ಸೂಕ್ತ ಕ್ರಮಕೈಗೊಂಡು ಪ್ರಾಧಿಕಾರಕ್ಕೆ ವರದಿಸುವಂತೆ ಸೂಕ್ತ ನಿರ್ದೇಶನ ನೀಡಲು ಕೋರಿದೆ

ತಮ್ಮ ವಿಶ್ವಾಸಿ

(ಬಿ.ಹೆಚ್. ಮರಿಜಪ್ಪ)
ಕಾರ್ಯದರ್ಶಿ
ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು.

ಪ್ರತಿಯನ್ನು ತಕ್ಷಣದ ಸೂಕ್ತ ಕ್ರಮಕ್ಕಾಗಿ

1. ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು, ಮೈಸೂರು, ಬೆಳಗಾಂ, ಮತ್ತು ಗುಲ್ಬರ್ಗಾ ಪ್ರಾಂತ,
2. ಸಹಕಾರ ಸಂಘಗಳ ಜಂಟಿ ನಿಬಂಧಕರು. (ಕಾನೂನು ಕೋಶ) ಕೇಂದ್ರ ಕಛೇರಿ ಬೆಂಗಳೂರು.
3. ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು,
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ; ಬೆಂಗಳೂರು ಇವರಿಗೆ ಕಳುಹಿಸುತ್ತಾ, ಸೌಹಾರ್ದ ಸಹಕಾರಿ/ಬ್ಯಾಂಕ್‌ಗಳಿಗೆ ಸೂಕ್ತ ತಿದ್ದುಪಡಿ ಪ್ರಸ್ತಾವೆ ಸಲ್ಲಿಸಿ ಸಕ್ಷಮ ನಿಬಂಧಕರಿಂದ ಸೂಕ್ತ ತಿದ್ದುಪಡಿ ಆದೇಶ ಪಡೆಯಲು ಮತ್ತು ಚುನಾವಣೆಗಳನ್ನು ಸೌಹಾರ್ದ ಸಹಕಾರಿಗಳು 2015ರ ನಿಯಮಗಳನ್ವಯ ನಡೆಸುವ ಬಗ್ಗೆ ಅಗತ್ಯ ಕ್ರಮಕೈಗೊಂಡು ಪ್ರಾಧಿಕಾರಕ್ಕೆ ವಿವರಗಳನ್ನು ಸಲ್ಲಿಸಲು ತಿಳಿಸಿದೆ.

# ರಾಜ್ಯದ ಸೌಹಾರ್ದ ಸಹಕಾರಿಗಳ ಚುನಾವಣಾ ವೇಳಾಪಟ್ಟಿ : ಪ್ರಾಧಿಕಾರದ ಅಧಿಸೂಚನೆ

**ಕರ್ನಾಟಕ ಸರ್ಕಾರ**
**ಸಹಕಾರ ಚುನಾವಣಾ ಪ್ರಾಧಿಕಾರ**

ಸಂಖ್ಯೆ: ಸಚುಪ್ರಾ/ಆಡಳಿತ/ಚುನಾವಣೆ/07/2016

3ನೇ ಮಹಡಿ, ಟಿ.ಟಿ.ಎಂ.ಸಿ.ಕಟ್ಟಡ "ಎ"ಬ್ಲಾಕ್,
ಶಾಂತಿನಗರ, ಬೆಂಗಳೂರು–560027
ದಿನಾಂಕ: 16.01.2016.

## ಅಧಿಸೂಚನೆ

ವಿಷಯ:– 2016ನೇ ಸಾಲಿನಲ್ಲಿ ಪದಾವಧಿ ಮುಗಿಯಲಿರುವ ಮಾಧ್ಯಮಿಕ/ಫೆಡರಲ್ ಹಾಗೂ ಅಪೆಕ್ಸ್ ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಲಿಗಳಿಗೆ ಚುನಾವಣೆ ನಡೆಸಲು ಅಧಿಸೂಚನೆ ಹೊರಡಿಸುವ ಬಗ್ಗೆ.

ಉಲ್ಲೇಖ:–
1. ಸಹಕಾರ ಚುನಾವಣಾ ಪ್ರಾಧಿಕಾರದ ಅಧಿಸೂಚನೆ ಸಂಖ್ಯೆ: ಸಚುಆ/ಚುನಾವಣೆ/ಜನವರಿ–ಜೂನ್/01/2016 ದಿನಾಂಕ: 18.12.2015
2. ಪ್ರಾಧಿಕಾರದ ಆದೇಶ ಸಂಖ್ಯೆ: ಸಚುಆ/ಚುಅನೇ/03/2016 ದಿನಾಂಕ: 18.12.2015
3. ಸಹಕಾರ ಚುನಾವಣಾ ಪ್ರಾಧಿಕಾರದ ಆದೇಶ ಸಂಖ್ಯೆ: ಸಚುಪ್ರಾ/ಚುಅನೇ/ಮಾಸಂ/04/2016 ದಿನಾಂಕ: 16.01.2016.
4. ಸಹಕಾರ ಚುನಾವಣಾ ಪ್ರಾಧಿಕಾರದ ಆದೇಶ ಸಂಖ್ಯೆ: ಸಚುಪ್ರಾ/ಚುಅನೇ/ಫೆಸಂ/05/2016 ದಿನಾಂಕ: 16.01.2016.
5. ಸಹಕಾರ ಚುನಾವಣಾ ಪ್ರಾಧಿಕಾರದ ಆದೇಶ ಸಂಖ್ಯೆ: ಸಚುಪ್ರಾ/ಚುಅನೇ/ಅಪೆಕ್ಸ್‌ಸಂ/06/2016 ದಿನಾಂಕ: 16.01.2016.

★★★

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ (ಸಂಕ್ಷಿಪ್ತವಾಗಿ 'ಅಧಿನಿಯಮ') ಪ್ರಕರಣ 39ಎ (1) ಮತ್ತು ಪ್ರಕರಣ 39–ಎಎ(2) ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 26–ಎ ಗಳ ಅವಕಾಶದಂತೆ ರಾಜ್ಯದಲ್ಲಿನ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ನಡೆಯುವ ಎಲ್ಲಾ ಚುನಾವಣೆಗಳನ್ನು ನಡೆಸುವ ಮತ್ತು ತತ್ಸಂಬಂಧಿತ ಮತದಾರರ ಪಟ್ಟಿಗಳನ್ನು ತಯಾರಿಸುವ ಕಾರ್ಯದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣವು ಸಹಕಾರ ಚುನಾವಣಾ ಪ್ರಾಧಿಕಾರದಲ್ಲಿ ನಿಹಿತವಾಗಿರುತ್ತದೆ. ಅಧಿನಿಯಮ ಪ್ರಕರಣ 39–ಎ(2) ರೀತ್ಯಾ ಪ್ರಾಥಮಿಕ, ಮಾಧ್ಯಮಿಕ, ಫೆಡರಲ್ ಮತ್ತು ಅಪೆಕ್ಸ್ ಸಹಕಾರ ಸಂಘ/ಸಹಕಾರಿಗಳಿಗೆ ನಾಲ್ಕು ಹಂತದಲ್ಲಿ ಚುನಾವಣೆಗಳು ನಡೆಯತಕ್ಕದ್ದಾಗಿದೆ. ಸಹಕಾರ ಚುನಾವಣಾ ಪ್ರಾಧಿಕಾರವು ಮತದಾರರ ಪಟ್ಟಿಯ ತಯಾರಿಕೆಗಾಗಿ ಮತ್ತು ಚುನಾವಣೆಗಳನ್ನು ನಡೆಸುವುದಕ್ಕಾಗಿ ಪೂರ್ವಸಿದ್ಧತಾ ಕಾರ್ಯವನ್ನು ಸಹಕಾರ ಸಂಘದ ಮಂಡಲಿಯ ಪದಾವಧಿಯ ಮುಕ್ತಾಯದ ಹಿಂದಿನ ಕೊನೆಯ ಆರು ತಿಂಗಳ ಅವಧಿಯಲ್ಲಿ ಪ್ರಾರಂಭಿಸಬಹುದಾಗಿರುತ್ತದೆ. ಅಧಿನಿಯಮ ಪ್ರಕರಣ 39–ಎಎ(15)(ಎ)ರೀತ್ಯಾ ಪ್ರತಿಯೊಂದು ಸಹಕಾರ ಸಂಘದ ಮಂಡಲಿಯು ತನ್ನ ಪದಾವಧಿಯ ಮುಕ್ತಾಯದ ಬಗ್ಗೆ ಅಂಥ ಪದಾವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಹಿಂದಿನ ಕನಿಷ್ಠ 4 ತಿಂಗಳಿಗೆ ಮುಂಚೆ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದಾಗಿದೆ. ಅಲ್ಲದೇ ಪ್ರಾಧಿಕಾರವು ಸುಗಮವಾಗಿ ಮತದಾರರ ಪಟ್ಟಿಗಳನ್ನು ತಯಾರಿಸುವುದಕ್ಕೆ ಮತ್ತು ಚುನಾವಣೆಗಳನ್ನು ನಡೆಸುವುದಕ್ಕೆ ಸಂಬಂಧಪಟ್ಟವರು ಅವಶ್ಯಕವಾದ ಎಲ್ಲಾ ನೆರವು, ಸಹಾಯ ಮತ್ತು ಸಹಕಾರವನ್ನು ನೀಡತಕ್ಕದ್ದಾಗಿದೆ. ಅಲ್ಲದೇ ಚುನಾವಣಾ ಪ್ರಾಧಿಕಾರಕ್ಕೆ/ಚುನಾವಣಾಧಿಕಾರಿಗಳಿಗೆ ಅಗತ್ಯ ಪುಸ್ತಕಗಳು, ದಾಖಲೆಗಳು ಹಾಗೂ ಮಾಹಿತಿಯನ್ನು ನೀಡುವ ಜವಾಬ್ದಾರಿ ಸಂಬಂಧಿಸಿದ ಸಹಕಾರ ಸಂಘಗಳು/ಸಹಕಾರಿಗಳದ್ದಾಗಿರುತ್ತದೆ.

ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ–39ಎ(2) ರೀತ್ಯಾ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ–26 ಮತ್ತು 26ಎ ರೀತ್ಯಾ ಹಾಗೂ ಸರ್ಕಾರದ ಇತ್ತೀಚಿನ ತಿದ್ದುಪಡಿಯಂತೆ ಸಹಕಾರ ಸಂಘಗಳ / ಸಹಕಾರಿಗಳ ಮಂಡಲಿಗಳ ಸದಸ್ಯರ/ಪದಾಧಿಕಾರಿಗಳ ಸಾಮಾನ್ಯ ಚುನಾವಣೆಗಳನ್ನು 4 ಹಂತಗಳಲ್ಲಿ ನಡೆಸತಕ್ಕದ್ದಾಗಿದೆ.

--2

–2–

- ಅಧಿನಿಯಮ ಪ್ರಕರಣ–39ಎ(2)(ಎ) ರೀತ್ಯಾ ಮೊದಲ ಹಂತದಲ್ಲಿ ಪ್ರಾಥಮಿಕ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಸಂಬಂಧಪಟ್ಟಂತೆ ಚುನಾವಣೆಗಳನ್ನು ನಡೆಸತಕ್ಕದ್ದಾಗಿದೆ.
- ಅಧಿನಿಯಮ ಪ್ರಕರಣ–39ಎ(2)(ಬಿ) ರೀತ್ಯಾ ಎರಡನೇ ಹಂತದಲ್ಲಿ ಮಾಧ್ಯಮಿಕ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಸಂಬಂಧಪಟ್ಟಂತೆ ಚುನಾವಣೆಗಳನ್ನು ನಡೆಸತಕ್ಕದ್ದಾಗಿದೆ.
- ಅಧಿನಿಯಮ ಪ್ರಕರಣ–39ಎ(2)(ಸಿ) ರೀತ್ಯಾ ಮೂರನೇ ಹಂತದಲ್ಲಿ ಫೆಡರಲ್ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಸಂಬಂಧಪಟ್ಟಂತೆ ಚುನಾವಣೆಗಳನ್ನು ನಡೆಸತಕ್ಕದ್ದಾಗಿದೆ.
- ಅಧಿನಿಯಮ–39ಎ(2)(ಡಿ) ರೀತ್ಯಾ ನಾಲ್ಕನೇ ಹಂತದಲ್ಲಿ ಅಪೆಕ್ಸ್ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಸಂಬಂಧಪಟ್ಟಂತೆ ಚುನಾವಣೆಗಳನ್ನು ನಡೆಸತಕ್ಕದ್ದಾಗಿದೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ 39ಎ ಅವಕಾಶದಂತೆ, ಮೊದಲ ಹಂತದಲ್ಲಿ 2016ನೇ ಜನವರಿ ಇಂದ ಜೂನ್‌ವರೆಗೆ ಚುನಾವಣೆ ನಡೆಸಲು ಬಾಕಿ ಇರುವ ಪ್ರಾಥಮಿಕ ಹಂತದ ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಲಿಗಳಿಗೆ/ಪದಾಧಿಕಾರಿಗಳಿಗೆ ಚುನಾವಣೆಗಳನ್ನು ನಡೆಸಲು ಉಲ್ಲೇಖ(2)ರ ಆದೇಶದಲ್ಲಿ ಚುನಾವಣಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. ದಿನಾಂಕ 30.06.2016 ರವರೆಗೆ ಆಡಳಿತ ಮಂಡಲಿ ಪದಾವಧಿ ಮುಗಿಯಲಿರುವ ಪ್ರಾಥಮಿಕ ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಲಿಗೆ ಚುನಾವಣೆಗಳನ್ನು ನಡೆಸುವ ಸಂಬಂಧ ಚುನಾವಣಾ ದಿನಾಂಕಗಳನ್ನು ನಿಗಧಿಪಡಿಸಿ ದಿನಾಂಕ 18.12.2015 ರಂದು ಉಲ್ಲೇಖ(1)ರ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಪ್ರಾಥಮಿಕ ಹಂತದ ಸಹಕಾರ ಸಂಘಗಳ / ಸಹಕಾರಿಗಳ ಚುನಾವಣೆ ಪ್ರಕ್ರಿಯೆ ಮುಗಿದ ನಂತರ ಎರಡನೇ ಹಂತದಲ್ಲಿ ಮಾಧ್ಯಮಿಕ ಸಹಕಾರ ಸಂಘಗಳ / ಸಹಕಾರಿಗಳ ಚುನಾವಣೆಯನ್ನು, ಮೂರನೇ ಹಂತದಲ್ಲಿ ಫೆಡರಲ್ ಹಾಗೂ ನಾಲ್ಕನೇ ಹಂತದಲ್ಲಿ ಅಪೆಕ್ಸ್ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆಯನ್ನು ನಡೆಸತಕ್ಕದ್ದಾಗಿದೆ. ಪ್ರತಿ ಹಂತದ ಚುನಾವಣೆಗಳನ್ನು ನಿಯಮಾನುಸಾರ ನಡೆಸತಕ್ಕದ್ದಾಗಿದೆ. ಪ್ರಾಥಮಿಕ ಹಂತದ ಚುನಾವಣೆಯ ನಂತರ ಮಾಧ್ಯಮಿಕ ಮತ್ತು ಫೆಡರಲ್ ಸಂಘಗಳಿಗೆ ಪ್ರತಿನಿಧಿಗಳನ್ನು ಕಳುಹಿಸಬೇಕಾಗಿರುತ್ತದೆ. ಪ್ರತಿನಿಧಿಗಳನ್ನು ಕಳುಹಿಸಲು ಮತ್ತು ಚುನಾವಣೆಯನ್ನು ನಿಯಮಾನುಸಾರ ನಡೆಸಲು ನಿಗದಿತ ಕಾಲಾವಕಾಶವು ಬೇಕಾಗಿರುತ್ತದೆ. ಅದರಂತೆ ದಿನಾಂಕಗಳನ್ನು ನಿಗದಿಪಡಿಸಿ ಅಧಿಸೂಚನೆಯನ್ನು ಹೊರಡಿಸತಕ್ಕದ್ದಾಗಿದೆ.

ಅದರಂತೆ ಎರಡನೇ ಹಂತದಲ್ಲಿ ಮಾಧ್ಯಮಿಕ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಚುನಾವಣೆಯನ್ನು ನಡೆಸುವ ಸಂಬಂಧ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 2(ಐ-1)ರ ಅವಕಾಶದಂತೆ ಚುನಾವಣಾಧಿಕಾರಿಗಳನ್ನು ಪ್ರಾಧಿಕಾರದಿಂದ ನೇಮಕಾತಿ ಮಾಡಬೇಕಾಗಿದ್ದು, ಮಾಧ್ಯಮಿಕ ಸಹಕಾರ ಸಂಘಗಳ / ಸಹಕಾರಿಗಳ ಚುನಾವಣೆಗಳನ್ನು ನಡೆಸಲು ಉಲ್ಲೇಖ(3)ರಲ್ಲಿ ಕಾಣಿಸಿರುವ ಆದೇಶದಲ್ಲಿ **ರಾಜ್ಯದ ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರನ್ನು ಮಾಧ್ಯಮಿಕ ಸಹಕಾರ ಸಂಘಗಳ / ಸಹಕಾರಿಗಳ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನಾಗಿ ನೇಮಕಾತಿ ಮಾಡಿ ಈಗಾಗಲೇ ಆದೇಶಿಸಲಾಗಿದೆ.** ಚುನಾವಣಾಧಿಕಾರಿಗಳು ಅವರಿಗೆ ಸಹಾಯಕರಾಗಿ ಕೆಲಸ ನಿರ್ವಹಿಸಲು ಸಹಾಯಕ ಚುನಾವಣಾಧಿಕಾರಿಗಳ ನೇಮಕಾತಿಯ ಅವಶ್ಯಕತೆ ಇದ್ದಲ್ಲಿ ಸೂಕ್ತ ಅಧಿಕಾರಿಯ ಹೆಸರು ಮತ್ತು ಪದನಾಮವನ್ನು ತಿಳಿಸಿ ಪ್ರಾಧಿಕಾರದಿಂದ ನೇಮಕಾತಿ ಆದೇಶ ಪಡೆಯತಕ್ಕದ್ದಾಗಿದೆ.

ನಂತರ ಮೂರನೇ ಹಂತದಲ್ಲಿ ಫೆಡರಲ್ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಚುನಾವಣೆಯನ್ನು ನಡೆಸುವ ಸಂಬಂಧ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 2(ಐ-1)ರ ಅವಕಾಶದಂತೆ ಚುನಾವಣಾಧಿಕಾರಿಗಳನ್ನು ಪ್ರಾಧಿಕಾರದಿಂದ ನೇಮಕಾತಿ ಮಾಡಬೇಕಾಗಿದ್ದು, ಫೆಡರಲ್ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆಗಳನ್ನು ನಡೆಸಲು ಉಲ್ಲೇಖ(4)ರ ಆದೇಶದಲ್ಲಿ **ರಾಜ್ಯದ ಎಲ್ಲಾ ಜಿಲ್ಲಾ ಜಿಲ್ಲಾಧಿಕಾರಿಗಳನ್ನು ಫೆಡರಲ್ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನಾಗಿ ನೇಮಕಾತಿ ಮಾಡಿ ಈಗಾಗಲೇ ಆದೇಶಿಸಲಾಗಿದೆ.** ಚುನಾವಣಾಧಿಕಾರಿಗಳು ಅವರಿಗೆ ಸಹಾಯಕರಾಗಿ ಕೆಲಸ ನಿರ್ವಹಿಸಲು ಸಹಾಯಕ ಚುನಾವಣಾಧಿಕಾರಿಗಳ ನೇಮಕಾತಿಯ ಅವಶ್ಯಕತೆ ಇದ್ದಲ್ಲಿ ಸೂಕ್ತ ಅಧಿಕಾರಿಯ ಹೆಸರು ಮತ್ತು ಪದನಾಮವನ್ನು ತಿಳಿಸಿ ಪ್ರಾಧಿಕಾರದಿಂದ ನೇಮಕಾತಿ ಆದೇಶ ಪಡೆಯುವುದು.

––3

–3–

ಅದೇ ರೀತಿಯಲ್ಲಿ ನಾಲ್ಕನೇ ಹಂತದಲ್ಲಿ ಅಪೆಕ್ಸ್ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಚುನಾವಣೆಯನ್ನು ನಡೆಸುವ ಸಂಬಂಧ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 2(ಐ-1)ರ ಅವಕಾಶದಂತೆ ಚುನಾವಣಾಧಿಕಾರಿಗಳನ್ನು ಪ್ರಾಧಿಕಾರದಿಂದ ನೇಮಕಾತಿ ಮಾಡಬೇಕಾಗಿದ್ದು, ಅಪೆಕ್ಸ್ ಸಹಕಾರ ಸಂಘಗಳ / ಸಹಕಾರಿಗಳ ಚುನಾವಣೆಗಳನ್ನು ನಡೆಸಲು ಉಲ್ಲೇಖ(5)ರ ಆದೇಶದಲ್ಲಿ **ರಾಜ್ಯದ ಎಲ್ಲಾ ಪ್ರಾದೇಶಿಕ ಆಯುಕ್ತರುಗಳನ್ನು (Regional Commissioners)ಅಪೆಕ್ಸ್ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನಾಗಿ ನೇಮಕಾತಿ ಮಾಡಿ ಆದೇಶಿಸಲಾಗಿದೆ.** ಚುನಾವಣಾಧಿಕಾರಿಗಳು ಅವರಿಗೆ ಸಹಾಯಕರಾಗಿ ಕೆಲಸ ನಿರ್ವಹಿಸಲು ಸಹಾಯಕ ಚುನಾವಣಾಧಿಕಾರಿಗಳ ನೇಮಕಾತಿಯ ಅವಶ್ಯಕತೆ ಇದ್ದಲ್ಲಿ ಸೂಕ್ತ ಅಧಿಕಾರಿ ಹೆಸರು ಮತ್ತು ಪದನಾಮವನ್ನು ತಿಳಿಸಿ ಪ್ರಾಧಿಕಾರದಿಂದ ನೇಮಕಾತಿ ಆದೇಶ ಪಡೆಯುವುದು.

ಮೇಲಿನ ಕಂಡಿಕೆಗಳಲ್ಲಿ ಕ್ರಮವಾಗಿ ವಿವರಿಸಿರುವಂತೆ ಚುನಾವಣಾಧಿಕಾರಿಗಳು ಮಾಧ್ಯಮಿಕ, ಫೆಡರಲ್ ಹಾಗೂ ಅಪೆಕ್ಸ್ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆ ನಡೆಸಲು ಕೆಳಕಂಡ ದಿನಾಂಕಗಳನ್ನು ಗೊತ್ತುಪಡಿಸಿ ಅಧಿಸೂಚನೆ ಹೊರಡಿಸಿ ಸದರಿ ದಿನಾಂಕಗಳಲ್ಲಿ ಆಡಳಿತ ಮಂಡಲಿಗಳ ಚುನಾವಣೆಯನ್ನು ನಿಯಮಾನುಸಾರ ನಡೆಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಆದೇಶಿಸಿದೆ. ಈ ಅಧಿಸೂಚನೆಗೆ ಲಗತ್ತಿಸಿರುವ ಅನುಬಂಧ-1ರಲ್ಲಿ ಚುನಾವಣೆಗಳನ್ನು ನಿಯಮಾನುಸಾರ ಪಾರದರ್ಶಕವಾಗಿ ನಡೆಸುವ ಬಗ್ಗೆ ಅನುಸರಿಸಬೇಕಾದ ಮಾರ್ಗಸೂಚಿಗಳ ಬಗ್ಗೆ ಮತ್ತು ಅನುಬಂಧ-2ರ (ಚೆಕ್‌ಲಿಸ್ಟ್)ನಲ್ಲಿ ಚುನಾವಣಾಧಿಕಾರಿಗಳು ಚುನಾವಣೆ ನಡೆಸಲು ಅಗತ್ಯ ಕ್ರಮವಿಡುವ ಬಗ್ಗೆ ತಿಳಿಸಲಾಗಿದೆ.

| ಕ್ರ. ಸಂ. | ಸಹಕಾರ ಸಂಘಗಳ ವರ್ಗ | ಚುನಾವಣೆ ನಡೆಸಲು ಗೊತ್ತುಪಡಿಸಿದ ದಿನಾಂಕ / ಅವಧಿ |
|---|---|---|
| 01 | ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ-39ಎ(2)(ಬಿ) ರೀತ್ಯಾ ಹಾಗೂ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ-26ಎ ರೀತ್ಯಾ ಎರಡನೇ ಹಂತದಲ್ಲಿ ಬಿಡಿ ವ್ಯಕ್ತಿಗಳ ಸದಸ್ಯತ್ವ ಮತ್ತು ಬೇರೊಂದು ಸಹಕಾರ ಸಂಘಗಳ ಸದಸ್ಯತ್ವ ಪಡೆಯಲು ಅವಕಾಶವಿರುವ ಮಾಧ್ಯಮಿಕ ಸಹಕಾರ ಸಂಘಗಳ ಚುನಾವಣೆಯನ್ನು ನಡೆಸಲು ಗೊತ್ತುಪಡಿಸಲಾದ ದಿನಾಂಕಗಳು. | ದಿನಾಂಕ 30.05.2016 ಮತ್ತು 31.05.2016ರ ಅವಧಿಯಲ್ಲಿ ಚುನಾವಣಾಧಿಕಾರಿಗಳು ಸೂಕ್ತವೆನಿಸಿದ ಯಾವುದೇ ದಿನಾಂಕದಂದು ಚುನಾವಣೆ ನಡೆಸತಕ್ಕದ್ದಾಗಿದೆ. |
| 02 | ಸಹಕಾರ ಸಂಘಗಳ ಅಧಿನಿಯಮ 1959 ಅಧಿನಿಯಮ ಪ್ರಕರಣ-39ಎ(2)(ಸಿ) ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ-26(ಎ) ರೀತ್ಯಾ 3ನೇ ಹಂತದ ಫೆಡರಲ್ ಸಹಕಾರ ಸಂಘಗಳ ಚುನಾವಣೆ ನಡೆಸಲು ಗೊತ್ತುಪಡಿಸಲಾದ ದಿನಾಂಕಗಳು.<br>(ಎ) ಪ್ರಾಥಮಿಕ ಸಹಕಾರ ಸಂಘಗಳು /ಸಹಕಾರಿಗಳು ಮಾತ್ರ ಸದಸ್ಯತ್ವ ಪಡೆಯಲು ಅವಕಾಶವಿರುವ ಫೆಡರಲ್ ಸಹಕಾರ ಸಂಘಗಳು / ಒಕ್ಕೂಟ ಸಹಕಾರಿಗಳು<br>(ಬಿ) ಎಲ್ಲಾ ವರ್ಗದ ಸಹಕಾರ ಸಂಘಗಳು /ಸಹಕಾರಿಗಳ ಸದಸ್ಯತ್ವ ಹೊಂದಿರುವ ಫೆಡರಲ್ ಸಹಕಾರ ಸಂಘಗಳು/ಒಕ್ಕೂಟ ಸಹಕಾರಿಗಳು | ದಿನಾಂಕ 30.07.2016 ಮತ್ತು 31.07.2016ರ ಅವಧಿಯಲ್ಲಿ ಚುನಾವಣಾಧಿಕಾರಿಗಳು ಸೂಕ್ತವೆನಿಸಿದ ಯಾವುದೇ ದಿನಾಂಕದಂದು ಚುನಾವಣೆ ನಡೆಸತಕ್ಕದ್ದಾಗಿದೆ. |
| 03 | ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎ(2)(ಡಿ), ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 26ಎ ರೀತ್ಯಾ ನಾಲ್ಕನೇ ಹಂತದ ಅಪೆಕ್ಸ್ ಸಹಕಾರ ಸಂಘಗಳ ಚುನಾವಣೆ ನಡೆಸಲು ಗೊತ್ತುಪಡಿಸಲಾದ ದಿನಾಂಕಗಳು.<br>(ಎ)ರಾಜ್ಯಾದ್ಯಂತ ಕಾರ್ಯವ್ಯಾಪ್ತಿ ಹೊಂದಿರುವ ಪ್ರಾಥಮಿಕ ಸಹಕಾರ ಸಂಘಗಳ /ಸಹಕಾರಿಗಳ ಸದಸ್ಯತ್ವ ಹೊಂದಿರುವ ಫೆಡರಲ್ (ಅಪೆಕ್ಸ್) ಸಂಘಗಳು/ಒಕ್ಕೂಟ ಸಹಕಾರಿಗಳು<br>(ಬಿ)ರಾಜ್ಯಾದ್ಯಂತ ಕಾರ್ಯವ್ಯಾಪ್ತಿ ಹೊಂದಿರುವ – ಅಪೆಕ್ಸ್ ಸಹಕಾರ ಸಂಘಗಳು / ಸಹಕಾರಿಗಳು | ದಿನಾಂಕ 28.09.2016 ಮತ್ತು 29.09.2016ರ ಅವಧಿಯಲ್ಲಿ ಚುನಾವಣಾಧಿಕಾರಿಗಳು ಸೂಕ್ತವೆನಿಸಿದ ದಿನಾಂಕದಂದು ಚುನಾವಣೆ ನಡೆಸತಕ್ಕದ್ದಾಗಿದೆ. |

--4

-4-

ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಇ ಮತ್ತು ಸಹಕಾರಿ ನಿಯಮ 5ಸಿ ರಂತೆ ಪ್ರಾಧಿಕಾರದಿಂದ ನೇಮಕಾತಿಮಾಡಲ್ಪಟ್ಟ ಚುನಾವಣಾಧಿಕಾರಿಗಳು ಮಾಧ್ಯಮಿಕ, ಫೆಡರಲ್ ಮತ್ತು ಅಪೆಕ್ಸ್ ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಳಿಯ ಸಾಮಾನ್ಯ ಚುನಾವಣೆ ಮತ್ತು ಪದಾಧಿಕಾರಿಗಳ ಚುನಾವಣೆ, ಹೊಸದಾಗಿ ನೋಂದಣಿಯಾದ ಆಕಸ್ಮಿಕವಾಗಿ ತೆರವಾದ ಮತ್ತು ಆಡಳಿತಗಾರ /ವಿಶೇಷಾಧಿಕಾರಿ ನೇಮಕಗೊಂಡ ಸಂಘ/ಸಹಕಾರಿಗಳ ಚುನಾವಣೆಗಳನ್ನು ನಡೆಸಲು ಸೂಕ್ತ ರಿಟರ್ನಿಂಗ್ ಅಧಿಕಾರಿ ಮತ್ತು ಅವಶ್ಯಕತೆಗನುಗುಣವಾಗಿ ಸಹಾಯಕ ರಿಟರ್ನಿಂಗ್ ಅಧಿಕಾರಿಗಳ ಹೆಸರುಗಳನ್ನು Randomization ಕ್ರಮ ಅನುಸರಿಸಿ ಪ್ರಾಧಿಕಾರಕ್ಕೆ ಸಲ್ಲಿಸಿ, ಪ್ರಾಧಿಕಾರದಿಂದ ನೇಮಕಾತಿ ಆದೇಶಗಳನ್ನು ಪಡೆದು ಅನುಬಂಧ-1 ಮತ್ತು ಅನುಬಂಧ-2ರ ಮಾರ್ಗಸೂಚಿಗಳಂತೆ ಚುನಾವಣೆಗಳನ್ನು ನಿಯಮಾನುಸಾರ ಪಾರದರ್ಶಕವಾಗಿ ನಡೆಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.

(ಎನ್.ಸಿ. ಮುನಿಯಪ್ಪ)
ಆಯುಕ್ತರು
ಸಹಕಾರ ಚುನಾವಣಾ ಪ್ರಾಧಿಕಾರ,
ಬೆಂಗಳೂರು.

**ಇವರಿಗೆ:**

1. ಪ್ರಾದೇಶಿಕ ಆಯುಕ್ತರು (**Regional Commissioners**) (..............................................) ಹಾಗೂ ಚುನಾವಣಾಧಿಕಾರಿಗಳು (**ಅಪೆಕ್ಸ್ ಸಹಕಾರ ಸಂಘಗಳು**).
2. ಜಿಲ್ಲಾಧಿಕಾರಿಗಳು,..................................................ಜಿಲ್ಲೆ ಹಾಗೂ ಚುನಾವಣಾಧಿಕಾರಿಗಳು (**ಫೆಡರಲ್ ಸಹಕಾರ ಸಂಘಗಳು**).
3. ಸಹಕಾರ ಸಂಘಗಳ ಜಂಟಿನಿಬಂಧಕರು..............................ಪ್ರಾಂತ,........................................ಜಿಲ್ಲೆ ಹಾಗೂ ಚುನಾವಣಾಧಿಕಾರಿಗಳು (**ಮಾಧ್ಯಮಿಕ ಸಹಕಾರ ಸಂಘಗಳು**).

**ಪ್ರತಿಗಳು:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಅಂತಸ್ತುಗಳ ಕಟ್ಟಡ, 6ನೇ ಮಹಡಿ, ಬೆಂಗಳೂರು.
2. ಸಹಕಾರ ಸಂಘಗಳ ನಿಬಂಧಕರು, ನಂ.1,ಆಲಿಆಸ್ಕರ್ ರಸ್ತೆ, ಕರ್ನಾಟಕ ರಾಜ್ಯ, ಬೆಂಗಳೂರು.
3. ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಎಲ್ಲಾ ಸಹಕಾರ ಸಂಘಗಳ ಅಪರ ನಿಬಂಧಕರಿಗೆ.
4. ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಎಲ್ಲಾ ಸಹಕಾರ ಸಂಘಗಳ ಜಂಟಿ ನಿಬಂಧಕರಿಗೆ.
5. ಸಹಕಾರ ಸಂಘಗಳ ಜಂಟಿ ನಿಬಂಧಕರು ಹಾಗೂ ಭೂ ಅಭಿವೃದ್ಧಿ ಅಧಿಕಾರಿ, ಕಾಡಾ, ಕಲಬುರಗಿ,
6. ಸಹಕಾರ ಸಂಘಗಳ ಜಂಟಿ ನಿಬಂಧಕರು ಹಾಗೂ ಭೂ ಅಭಿವೃದ್ಧಿ ಅಧಿಕಾರಿ, ಕಾಡಾ, ಬೆಳಗಾವಿ,
7. ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪ ನಿಬಂಧಕರುಗಳಿಗೆ.
8. ಎಲ್ಲಾ ಉಪವಿಭಾಗಗಳ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳಿಗೆ.
9. ರಕ್ಷಕಡತ / ಕಛೇರಿ ಪ್ರತಿ.

## ಶೀಘ್ರದಲ್ಲಿ ಸೌಹಾರ್ದ ಸಹಕಾರಿಗಳ ಪ್ರತ್ಯೇಕ ನ್ಯಾಯಾಲಯ ಕಾರ್ಯಾರಂಭ

ಕರ್ನಾಟಕ ಸರಕಾರವು ಸೌಹಾರ್ದ ಸಹಕಾರಿಗಳ ಮನವಿ ಪುರಸ್ಕರಿಸಿ, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಅಡಿಯಲ್ಲಿ ಕಾರ್ಯನಿರ್ವಹಿಸುವ ಸೌಹಾರ್ದ ಸಹಕಾರಿಗಳು ತಮ್ಮ ವ್ಯಾಜ್ಯಗಳ ಪರಿಹಾರಕ್ಕಾಗಿ ಮಂಜೂರು ಮಾಡಿರುವ ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಕಾರ್ಯಾರಂಭದ ಅಧಿಸೂಚನೆಯನ್ನು ಸಹಕಾರಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ. ಈ ನ್ಯಾಯಾಲಯದ ಕಾರ್ಯಾರಂಭದ ಪ್ರಾಥಮಿಕ ಹಂತದ ವ್ಯವಸ್ಥೆಗಳನ್ನು ಸಂಯುಕ್ತ ಸಹಕಾರಿಯು ಮಾಡುತ್ತಲಿದೆ. ಸರಕಾರದ ಅಧಿಸೂಚನೆಯನ್ನು ಸಹಕಾರಿಗಳ ಗಮನಕ್ಕಾಗಿ ಪ್ರಕಟಿಸಿದೆ.

ಕರ್ನಾಟಕ ಸರ್ಕಾರ.

ಸಂಖ್ಯೆ:ಸಿಒ 176 ಸಿಎಲ್‌ಎಂ 2015

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 08-01-2016.

**ಅಧಿಸೂಚನೆ**

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ (2000ದ ಕರ್ನಾಟಕ ಅಧಿನಿಯಮ ಸಂಖ್ಯೆ 17) ಪ್ರಕರಣ 3ರ ಉಪಪ್ರಕರಣ (3)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಅಧಿಸೂಚನೆ ಸಂಖ್ಯೆ:ಸಿಒ 220 ಸಿಎಲ್‌ಎಂ 2005 ದಿನಾಂಕ:22-08-2005 ಹಾಗೂ ಸಂಖ್ಯೆ: ಸಿಒ 295 ಸಿಎಲ್‌ಎಂ 2005, ದಿನಾಂಕ:21-08-2006 ಅನ್ನು ರದ್ದುಪಡಿಸಿ ಮತ್ತು ಅಧಿಸೂಚನೆ ಸಂಖ್ಯೆ:ಸಿಒ 355 ಸಿಎಲ್‌ಎಂ 2005 ದಿನಾಂಕ:12-04-2006 ಅನ್ನು ಭಾಗಶಃ ಮಾರ್ಪಡಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ಉಪಬಂಧಗಳಡಿಯಲ್ಲಿ ಸಹಕಾರಿಗಳ ರಿಜಿಸ್ಟ್ರಾರನಿಗೆ ಪ್ರದತ್ತವಾದ ಅಧಿಕಾರಗಳನ್ನು ಈ ಕೆಳಕಂಡ ಕೋಷ್ಟಕದ ಅಂಕಣ (1)ರಲ್ಲಿ ನಿರ್ದಿಷ್ಟಪಡಿಸಿರುವ ಅಧಿಕಾರಿಗಳನ್ನು ಅಂಕಣ (2)ರಲ್ಲಿ ನಿರ್ದಿಷ್ಟ ಪಡಿಸಿರುವ ಅಧಿಕಾರಿಗಳಿಗೆ ಕ್ರಮವಾಗಿ ಅಂಕಣ (3) ರಲ್ಲಿ ನಿರ್ದಿಷ್ಟಪಡಿಸಿರುವ ಸಹಕಾರಿಗಳ ಕಾರ್ಯವ್ಯಾಪ್ತಿಗೆ ಒಳಪಟ್ಟು ಪ್ರಧಾನ ಮಾಡಿದೆ, ಅಂದರೆ:

| ಕ್ರಮ ಸಂಖ್ಯೆ | ಅಧಿಕಾರಿಗಳು | ಸಹಕಾರಿಗಳು | ಪ್ರಧಾನ ಮಾಡಲಾದ ಅಧಿಕಾರಗಳು |
|---|---|---|---|
| 01 | 02 | 03 | 04 |
| 01 | ಉಪ ವಿಭಾಗಗಳ ಸಹಕಾರಿಗಳ ಸಹಾಯಕ ರಿಜಿಸ್ಟ್ರಾರ್‌ಗಳು (ಬೆಂಗಳೂರು ನಗರ ಜಿಲ್ಲೆಗಳ ಸಹಕಾರಿಗಳ ಸಹಾಯಕ ರಿಜಿಸ್ಟ್ರಾರ್‌ಗಳನ್ನು ಹೊರತುಪಡಿಸಿ) | ತಾಲ್ಲೂಕು ಮಟ್ಟಕ್ಕಿಂತ ಕಡಿಮೆ ಕಾರ್ಯ ವ್ಯಾಪ್ತಿಯ ಎಲ್ಲಾ ಸಹಕಾರಿಗಳು. | **ಪ್ರಕರಣಗಳು:** 35, 47, 48 ಮತ್ತು 51<br>**ನಿಯಮ:** 3, 7(1) ಮತ್ತು 29 |
| 02 | ಬೆಂಗಳೂರು ನಗರ ಜಿಲ್ಲೆಗಳ ಉಪವಿಭಾಗಗಳ ಸಹಕಾರಿಗಳ ಸಹಾಯಕ ರಿಜಿಸ್ಟ್ರಾರ್‌ಗಳು. | ಸಹಕಾರಿಗಳ ಸಹಾಯಕ ರಿಜಿಸ್ಟ್ರಾರ್‌ಗಳ ವ್ಯಾಪ್ತಿಯಲ್ಲಿ ನೋಂದಾಯಿತ ಕಛೇರಿ ಹೊಂದಿರುವ ಮತ್ತು ತಾಲ್ಲೂಕು ಮಟ್ಟಕ್ಕಿಂತ ಕಡಿಮೆ ಕಾರ್ಯವ್ಯಾಪ್ತಿ ಹೊಂದಿರುವ ಎಲ್ಲಾ ಸಹಕಾರಿಗಳು | **ಪ್ರಕರಣಗಳು:** 35, 47, 48 ಮತ್ತು 51<br>**ನಿಯಮ:** 3, 7(1) ಮತ್ತು 29 |
| 03 | ಜಿಲ್ಲಾ ಸಹಕಾರಿಗಳ ಉಪ ರಿಜಿಸ್ಟ್ರಾರ್‌ಗಳು (ಬೆಂಗಳೂರು ನಗರ ಜಿಲ್ಲೆಗಳ ಸಹಕಾರಿಗಳ ಉಪ ರಿಜಿಸ್ಟ್ರಾರ್‌ಗಳನ್ನು ಹೊರತುಪಡಿಸಿ) | ತಾಲ್ಲೂಕು ಮಟ್ಟದ ಕಾರ್ಯವ್ಯಾಪ್ತಿ ಮತ್ತು ಜಿಲ್ಲಾ ಮಟ್ಟಕ್ಕಿಂತ ಕಡಿಮೆ ಕಾರ್ಯ ವ್ಯಾಪ್ತಿಯ ಎಲ್ಲಾ ಸಹಕಾರಿಗಳು | **ಪ್ರಕರಣಗಳು:** 35, 47, 48 ಮತ್ತು 51<br>**ನಿಯಮ:** 3, 7(1) ಮತ್ತು 29 |
| 04 | ಬೆಂಗಳೂರು ನಗರ ಜಿಲ್ಲೆಗಳ ಸಹಕಾರಿಗಳ ಉಪ ರಿಜಿಸ್ಟ್ರಾರ್‌ಗಳು. | ಸಹಕಾರಿಗಳ ಉಪ ರಿಜಿಸ್ಟ್ರಾರ್‌ಗಳ ಕಾರ್ಯ ವ್ಯಾಪ್ತಿಯಲ್ಲಿ ನೋಂದಾಯಿತ ಕಛೇರಿ ಹೊಂದಿರುವ ಮತ್ತು ತಾಲ್ಲೂಕು ಮಟ್ಟದ ಕಾರ್ಯವ್ಯಾಪ್ತಿ ಮತ್ತು ಜಿಲ್ಲಾ ಮಟ್ಟಕ್ಕಿಂತ ಕಡಿಮೆ ಕಾರ್ಯವ್ಯಾಪ್ತಿಯ ಎಲ್ಲಾ ಸಹಕಾರಿಗಳು. | **ಪ್ರಕರಣಗಳು:** 35, 47, 48 ಮತ್ತು 51<br>**ನಿಯಮ:** 3, 7(1) ಮತ್ತು 29 |

//2//

| | | | |
|---|---|---|---|
| 05 | ಪ್ರಾಂತೀಯ ಸಹಕಾರಿಗಳ ಜಂಟಿ ರಿಜಿಸ್ಟ್ರಾರ್‌ಗಳು | ಜಿಲ್ಲಾ ಮಟ್ಟದ ಕಾರ್ಯವ್ಯಾಪ್ತಿ ಮತ್ತು ವಿಭಾಗೀಯ ಮಟ್ಟದ ಕಾರ್ಯವ್ಯಾಪ್ತಿ ಮೀರದ ಎಲ್ಲಾ ಸಹಕಾರಿಗಳು. | **ಪ್ರಕರಣಗಳು:** 35, 47, 48 ಮತ್ತು 51<br>**ನಿಯಮ:** 3, 7(1) ಮತ್ತು 29 |
| 06 | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಇದಕ್ಕೆ ಕರ್ನಾಟಕ ನಾಗರಿಕ ಸೇವಾ ನಿಯಮ-441 ರ ಪ್ರಕಾರ ನೇಮಕ ಹೊಂದಿದ ಸಹಕಾರ ಸಂಘಗಳ ಜಂಟಿ ರಿಜಿಸ್ಟ್ರಾರ್ | ಎಲ್ಲಾ ಕಾರ್ಯ ವ್ಯಾಪ್ತಿಯ ಎಲ್ಲಾ ಸಹಕಾರಿಗಳು. | **ಪ್ರಕರಣಗಳು:** 37ಎ, 39, 40, 41 (41ರ ಉಪ ಪ್ರಕರಣ (1) (ಬಿ) ಮತ್ತು (ಸಿ) ಹೊರತುಪಡಿಸಿ) 44 ಮತ್ತು 45<br>**ನಿಯಮ:** 11, 27 ಮತ್ತು 29 |
| 07 | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಇದಕ್ಕೆ ಕರ್ನಾಟಕ ನಾಗರಿಕ ಸೇವಾ ನಿಯಮ-441 ರ ಪ್ರಕಾರ ನೇಮಕ ಹೊಂದಿದ ಸಹಕಾರ ಸಂಘಗಳ ಸಹಾಯಕ ರಿಜಿಸ್ಟ್ರಾರ್ | ಎಲ್ಲಾ ಕಾರ್ಯ ವ್ಯಾಪ್ತಿಯ ಎಲ್ಲಾ ಸಹಕಾರಿಗಳು. | **ಪ್ರಕರಣಗಳು:** 43<br>**ನಿಯಮ :** 13, 14, 16, 17, 18,19 ಮತ್ತು 29 |

ನಿಯಮ 441 ರಡಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಇದಕ್ಕೆ ನೇಮಕ ಹೊಂದಿದ ಅಧಿಕಾರಿಗಳು ತಮ್ಮ ಕಾರ್ಯ ವ್ಯಾಪ್ತಿಯ ಯಾವುದೇ ಸ್ಥಳದಲ್ಲಿ ಅಗತ್ಯಕ್ಕೆ ತಕ್ಕಂತೆ ಉಪವೇಶನಗಳನ್ನು ನಡೆಸಿ ಕಾರ್ಯ ನಿರ್ವಹಿಸಬಹುದಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ. ವೆಂಕಟಸ್ವಾಮಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಸಹಕಾರ ಇಲಾಖೆ.
ದೂರವಾಣಿ ಸಂಖ್ಯೆ 080-22032368.

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು -- ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಲು ಕೋರಲಾಗಿದೆ. ಮತ್ತು ಅದರ 50 ಪ್ರತಿಗಳನ್ನು ಸಹಕಾರ ಇಲಾಖೆಗೆ ಕೂಡಲೇ ಕಳುಹಿಸಿಕೊಡಲು ಕೋರಲಾಗಿದೆ.

**ಪ್ರತಿಗಳು:**

1) ಸಹಕಾರ ಸಂಘಗಳ ನಿಬಂಧಕರು, ನಂ. 1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-52.
2) ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು, ನಂ. 17, ಜಯನಿವಾಸ, ಶಂಕರಮಠ ರಸ್ತೆ, ಬಸವನಗುಡಿ, ಬೆಂಗಳೂರು-04
3) ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು.
4) ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಸಂಯುಕ್ತ ಸಹಕಾರಿ ನಿಯಮಿತ, ನಿರ್ಮಾಣ ಭವನ, ಡಾ:ರಾಜಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10
5) ಮಾನ್ಯ ಸಹಕಾರ ಹಾಗೂ ಸಕ್ಕರೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
6) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಸಹಕಾರ ಇಲಾಖೆ.
7) ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

# ಜನವರಿ 2016ರಲ್ಲಿ ಸಂಯುಕ್ತ ಸಹಕಾರಿಯ ಶಾಸನಬದ್ಧ ಕಾರ್ಯಚಟುವಟಿಕೆಗಳು

**I. ವಿಶೇಷಾಧಿಕಾರಿಗಳ ನೇಮಕ :** ವಿವಿಧ ಕಾರಣಗಳಿಗಾಗಿ ಜನವರಿ 2016 ಮಾಹೆಯಲ್ಲಿ ಈ ಕೆಳಗಿನ ಸೌಹಾರ್ದ ಸಹಕಾರಿಗಳಿಗೆ ವಿಶೇಷಾಧಿಕಾರಿಗಳನ್ನು ನೇಮಕ ಮಾಡಲಾಗಿದೆ.

| ಕ್ರ.ಸಂ. | ಸಹಕಾರಿ | ವಿಶೇಷಾಧಿಕಾರಿಗಳು | ಕಾರಣಗಳು |
|---|---|---|---|
| 1. | ಸ್ವರ್ಣಶಕ್ತಿ ಮಲ್ಟಿಪರ್ಪಸ್ ಸೌಹಾರ್ದ ಕೋ-ಆಪರೇಟಿವ್ ಲಿ., ಬೆಂಗಳೂರು. (ಬಿಜಿಯು-215) | ಶ್ರೀಮತಿ ಕೃತಿ ಜನಾರ್ಧನ್, ಸಹ ಪ್ರಧಾನ ವ್ಯವಸ್ಥಾಪಕರು ಮತ್ತು ಬೆಂಗಳೂರು ವಿಭಾಗೀಯ ಅಧಿಕಾರಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. | ಸಕಾಲದಲ್ಲಿ ಠೇವಣಿದಾರರ ಠೇವಣಿಯನ್ನು ಸಕಾಲದಲ್ಲಿ ಹಿಂದುರುಗಿಸದೆ ಇರುವುದರಿಂದ ಸಹಕಾರಿಯ ಎಲ್ಲಾ ನಿರ್ದೇಶಕರನ್ನು ಅನರ್ಹಗೊಳಿಸಿ, ವಿಶೇಷಾಧಿಕಾರಿಯ ನೇಮಕ. |
| 2. | ಶ್ರೇಯಸ್ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೆಂಗಳೂರು. (ಬಿಜಿಯು -244) | ಶ್ರೀ ಗುರುಪ್ರಸಾದ್, ಅಧಿಕಾರಿ, ಕೇಂದ್ರ ಕಛೇರಿ, ಬೆಂಗಳೂರು. | ಠೇವಣಿದಾರರಿಗೆ ಠೇವಣಿಗಳನ್ನು ಸಕಾಲದಲ್ಲಿ ಮರುಪಾವತಿಸದೆ ಇರುವ ಕುರಿತು ರಾಜ್ಯದ ವಿವಿಧ ದಿನಪತ್ರಿಕೆಗಳಲ್ಲಿ ಮತ್ತು ದೃಶ್ಯ ಮಾಧ್ಯಮಗಳಲ್ಲಿ ಸಹಕಾರಿಯು ತನ್ನ ಠೇವಣಿದಾರರಿಗೆ ವಂಚಿಸಿರುವ ಕುರಿತು ವರದಿಗಳು ಪ್ರಸಾರವಾಗಿರುತ್ತವೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಸಹಕಾರಿಯ ಆಡಳಿತ ಮಂಡಲಿಯು ಹಣಕಾಸು ಅಕ್ರಮದಲ್ಲಿ ಭಾಗಿಯಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಸಹಕಾರಿಯ ನಿರ್ದೇಶಕರನ್ನು ಅನರ್ಹಗೊಳಿಸಿ, ವಿಶೇಷಾಧಿಕಾರಿ ನೇಮಕ. |
| 3. | ಪಾಂಚರಾತ್ರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೆಂಗಳೂರು. (ಬಿಜಿಯು-141) | ಶ್ರೀ ಪ್ರಭಯ್ಯ ಹಿರೇಮಠ, ಕಿರಿಯ ಅಧಿಕಾರಿ, ಕೇಂದ್ರ ಕಛೇರಿ, ಬೆಂಗಳೂರು. | ಸಹಕಾರಿಯ ಮಂಡಲಿಯ ಪದಾವಧಿ ಮುಕ್ತಾಯವಾಗಿದ್ದು, ನೂತನ ಮಂಡಲಿಯು ರಚನೆಯಾಗಿಲ್ಲದಿರುವುದರಿಂದ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗಿರುವ ಕಾರಣ. |
| 4. | ನಿಸರ್ಗ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ. (ಜಿಎಲ್‌ಬಿ-60) | ಶ್ರೀ ರಾಜಶೇಖರ್ ಹೆಚ್, ಕಿರಿಯ ಅಧಿಕಾರಿ, ಕಲಬುರಗಿ ವಿಭಾಗ, ಕಲಬುರಗಿ. | |
| 5. | ಭಾಗ್ಯವಂತಿದೇವಿ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ. (ಜಿಎಲ್‌ಬಿ-65) | ಶ್ರೀ ಬಲರಾಮ್ ಎನ್, ಕಿರಿಯ ಅಧಿಕಾರಿ, ಕಲಬುರಗಿ ವಿಭಾಗ, ಕಲಬುರಗಿ. | |
| 6. | ವೈಷ್ಣೋದೇವಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೆಂಗಳೂರು. (ಬಿಜಿಯು-145) | ಶ್ರೀ ಶ್ರೀಕಾಂತ, ಸಹಪ್ರಧಾನ ವ್ಯವಸ್ಥಾಪಕರು, ಕೇಂದ್ರ ಕಛೇರಿ, ಬೆಂಗಳೂರು. | |

**II. ಅಧಿಭಾರ ಪ್ರಕರಣ ದಾಖಲು :** ಕಾಯ್ದೆ, ನಿಯಮ ಮತ್ತು ಸಹಕಾರಿಯ ಉಪವಿಧಿಯನ್ನು ಉಲ್ಲಂಘಿಸಿ, ನಿರ್ಲಕ್ಷ್ಯದಿಂದ ವ್ಯವಹರಿಸಿರುವ ಕಾರಣದಿಂದ ಸಹಕಾರಿಗೆ ನಷ್ಟವನ್ನುಂಟು ಮಾಡಿರುವ ಸಹಕಾರಿಯ ಆಡಳಿತ ಮಂಡಲಿ ಮತ್ತು ಮುಖ್ಯ ಕಾರ್ಯನಿರ್ವಾಹಕರ ವಿರುದ್ಧ ಮಾನ್ಯ ನಿಬಂಧಕರ ನ್ಯಾಯಾಲಯದಲ್ಲಿ ಜನವರಿ ಮಾಹೆಯಲ್ಲಿ ಈ ಕೆಳಕಂಡ ಸೌಹಾರ್ದ ಸಹಕಾರಿಗಳ ವಿರುದ್ಧ ಸಹಕಾರಿಗಳ ನಿಬಂಧಕರ ನ್ಯಾಯಾಲಯದಲ್ಲಿ ಅಧಿಭಾರ ಅರ್ಜಿಯನ್ನು ದಾಖಲಿಸಲಾಗಿರುತ್ತದೆ.

1. ದಿ ಮಯೂರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಸಂಕೇಶ್ವರ, ಬೆಳಗಾವಿ.
2. ಹಿಂದುಸ್ತಾನ್ ಸೌಹಾರ್ದ ಪತ್ತಿನ ಸಹಕಾರಿ ನಿ., ವಿನೋಬನಗರ, ಶಿವಮೊಗ್ಗ.

## ಮೈಸೂರಿನ ರಾಜೀವ ಸ್ನೇಹ ಬಳಗದವರಿಂದ "ಬನೇಗಾ ಸ್ವಚ್ಛ ಭಾರತ" ಎನ್‌ಡಿಟಿವಿ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಭಾಗವಹಿಸುವ ಗೌರವ – ಶ್ರೀ ಹೆಚ್.ವಿ.ರಾಜೀವ ಬಳಗಕ್ಕೆ ಸಂಯುಕ್ತ ಸಹಕಾರಿಯ ಅಭಿನಂದನೆ



ದೇಶದ ನಂ.1 ಕ್ಲೀನ್ ಸಿಟಿ ಎನಿಸಿಕೊಂಡಿರುವ ಮೈಸೂರಿನಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರು ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ ನೇತೃತ್ವದಲ್ಲಿ ಸ್ವಚ್ಛ ಭಾರತ ಅಭಿಯಾನದಡಿಯಲ್ಲಿ 69 ವಾರಗಳ ಕಾಲ ಸತತ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಂಡ ಫಲವಾಗಿ "ಬನೇಗಾ ಸ್ವಚ್ಛ ಭಾರತ" ಎನ್‌ಡಿ ಟಿವಿ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಭಾಗವಹಿಸುವ ಅವಕಾಶ ಒದಗಿ ಬಂದದ್ದು ಸೌಹಾರ್ದ ಸಹಕಾರಿಗಳಿಗೆ ಅಭಿಮಾನದ ಸಂಗತಿ. ಇದಕ್ಕಾಗಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯವರು ಶ್ರೀ ರಾಜೀವ್ ಹಾಗೂ ಅವರ ಬಳಗದವರನ್ನು ಅಭಿನಂದಿಸಿದ್ದಾರೆ.

ದೇಶದಲ್ಲಿ ಸ್ವಚ್ಛ ಅಭಿಯಾನ ಕಾರ್ಯಕ್ರಮ ಪ್ರಾರಂಭದಿಂದ ಇದುವರೆಗೆ ಸತತ 69 ವಾರಗಳ ಕಾಲ ಪ್ರತಿ ಭಾನುವಾರ ಬೆಳಗ್ಗೆ 2 ಗಂಟೆಗಳ ಕಾಲ ರಾಜೀವ್ ಸ್ನೇಹ ಬಳಗದವರು ಮೈಸೂರಿನಲ್ಲಿ ಸ್ವಚ್ಛ ಅಭಿಯಾನ ಕಾರ್ಯಕ್ರಮವನ್ನು ಹಮ್ಮಿಕೊಂಡು ನಂತರ ಮೈಸೂರು ಮಹಾನಗರ ಪಾಲಿಕೆಯವರಿಗೆ ತಿಳಿಸಿ, ಕಸ ವಿಲೇವಾರಿ ವ್ಯವಸ್ಥೆ ಮಾಡುತ್ತಿರುವ ಈ ಕಾರ್ಯವನ್ನು ಗಮನಿಸಿದ ಕೇಂದ್ರದ ನಗರಾಭಿವೃದ್ಧಿ ಮಂತ್ರಾಲಯದವರು ಗಮನಿಸಿ, ದಿನಾಂಕ : 17–1–2016 ರಂದು ಮುಂಬೈನ ಫಿಲ್ಮಸಿಟಿ, ಗೋರೆಗಾಂವನಲ್ಲಿ ಎನ್‌ಡಿಟಿವಿಯವರು ಹಮ್ಮಿಕೊಂಡಿದ್ದ ರಾಷ್ಟ್ರೀಯ ಕಾರ್ಯಕ್ರಮ "ಬನೆಗಾ ಸ್ವಚ್ಛ ಭಾರತ" ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟಿರುವುದು ರಾಜ್ಯದ ಸೌಹಾರ್ದ ಸಹಕಾರಿಗಳಿಗೆಲ್ಲ ಸಂತೋಷವನ್ನುಂಟುಮಾಡಿದೆ.

ದೇಶದ ಹೆಸರಾಂತ ಹಿರಿಯ ನಟ ಶ್ರೀ ಅಮಿತಾಬ್ ಬಚ್ಚನ್‌ರವರು ನಡೆಸಿಕೊಟ್ಟ ಈ ಪ್ರತಿಷ್ಠಿತ ಕಾರ್ಯಕ್ರಮದ ವೇದಿಕೆಯಲ್ಲಿ ಗಂಗಾ ಸ್ವಚ್ಛತಾ ಅಭಿಯಾನದ ಶ್ರೀ ಚಿದಾನಂದ ಸ್ವಾಮೀಜಿಗಳು, ರಾಜಸ್ಥಾನದ ಶ್ರೀ ಮದನದಾಸರವರು, ಉತ್ತರ ಪ್ರದೇಶದ ವತಿಯಿಂದ ಕ್ರಿಕೆಟ್ ಆಟಗಾರ ಶ್ರೀ ಸುರೇಶ ರೈನಾ, ಶ್ರೀ ರಾಜೀವ ದುಬೆ ಮತ್ತು ಮೈಸೂರು ರಾಜೀವ್ ಸ್ನೇಹ ಬಳಗದ ವತಿಯಿಂದ ಶ್ರೀ ಹೆಚ್.ವಿ.ರಾಜೀವರವರು ಇದ್ದುದು ಹೆಮ್ಮೆಯ ವಿಷಯ. ಈ ಕಾರ್ಯಕ್ರಮವನ್ನು 15 ಕೋಟಿ ಜನರು ವಿಶ್ವದಾದ್ಯಂತ ವೀಕ್ಷಿಸಿದ್ದಾರೆಂದು ವರದಿ ತಿಳಿಸುತ್ತದೆ. ಮೈಸೂರಿನಲ್ಲಿ ಶ್ರೀ ರಾಜೀವ್ ಸ್ನೇಹ ಬಳಗದ ಈ ಸ್ವಚ್ಛ ಅಭಿಯಾನ ಪ್ರತಿ ಭಾನುವಾರ ಮುಂದುವರೆದಿದೆ.

ಮೈಸೂರಿನ ಪ್ರತಿಷ್ಠಿತ ಸಂಘ ಸಂಸ್ಥೆಗಳು, ಹಿರಿಯ ನಾಗರಿಕರು, ಗಣ್ಯಮಾನ್ಯರು ಸಹ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿರುವುದು ಸಂತೋಷದ ಹಾಗೂ ಸ್ವಾಗತಾರ್ಹ.

## ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿಯ 2ನೇ ವಾರ್ಷಿಕೋತ್ಸವ ಸಮಾರಂಭ



ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಸಹಕಾರಿಯ 2ನೇ ವಾರ್ಷಿಕೋತ್ಸವ ಸಮಾರಂಭವು ದಿನಾಂಕ 16.01.2016ರಂದು ಸಹಕಾರಿಯ ಮಾರ್ಗದರ್ಶಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮಹಾಂತೇಶ ಎಮ್. ಕವಟಗಿಮಠ ಇವರ ಅಮೃತ ಹಸ್ತದಿಂದ ಪೂಜಾ ಕಾರ್ಯಕ್ರಮ ನೆರವೇರಿಸಿತು. ಈ ಸಂದರ್ಭದಲ್ಲಿ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಜಗದೀಶ ಎಮ್ ಕವಟಗಿಮಠ, ಉಪಾಧ್ಯಕ್ಷರಾದ ಶ್ರೀ ಷಡಕ್ಷರಿ ಬಿ. ಮೂಗೇರಿ ಹಾಗೂ ಎಲ್ಲ ಸಂಚಾಲಕ ಮಂಡಳಿ ನಿರ್ದೇಶಕರು, ಸರ್ವ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ವಿಭಾಗೀಯ ಕಛೇರಿಗಳಲ್ಲಿ ಹಾಗೂ ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ 67ನೇ ಗಣರಾಜ್ಯೋತ್ಸವ ಆಚರಣೆ



ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಿಂದ ಕೇಂದ್ರ ಕಛೇರಿಯಲ್ಲಿ ಧ್ವಜಾರೋಹಣ



ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರಿಂದ ಕಲಬುರಗಿ ವಿಭಾಗದ ಕಛೇರಿಯಲ್ಲಿ ಧ್ವಜಾರೋಹಣ



ಬೆಳಗಾವಿ ವಿಭಾಗದ ಕಛೇರಿಯಲಿ ಸಹಕಾರಿಗಳ ಜಂಟಿ ನಿಬಂಧಕರಾದ ಶ್ರೀ ಎಮ್.ಡಿ.ಮಲ್ಲೂರರವರು ಧ್ವಜಾರೋಹಣ.



ಮೈಸೂರು ವಿಭಾಗಾಧಿಕಾರಿಗಳಿಂದ ಧ್ವಜಾರೋಹಣ




ವಿದ್ಯಾಕಿರಣ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಗೋಕಾಕ್



ಸುಯೋಗ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಮಹಾಲಿಂಗಪುರ



ಸೌಹಾರ್ದ ಸಹಕಾರಿ ದಿನ ಹಾಗೂ ಸಹಕಾರ ಭಾರತಿ ನೋಂದಣಿ ದಿನಾಂಕದ ಅಂಗವಾಗಿ ಶ್ರೀ ಕನ್ಯಕಾಪರಮೇಶ್ವರಿ ಸೌಹಾರ್ದ ಸಹಕಾರಿ ನಿ., ಚಿತ್ರದುರ್ಗ ಸಹಕಾರಿಯ ಅಂಬೇಡ್ಕರ್ ಸರ್ಕಲ್ ಶಾಖೆಯಲ್ಲಿ ದಿನಾಂಕ 23.01.2016ರಂದು ಜಿಲ್ಲಾ ಆಸ್ಪತ್ರೆ, ರೆಡ್‌ಕ್ರಾಸ್ ಸಂಸ್ಥೆ ಹಾಗೂ ವಾಸವಿ ರಕ್ತ ನಿಧಿ ಕೇಂದ್ರ ಇವರ ಸಹಯೋಗದೊಂದಿಗೆ ರಕ್ತದಾನ ಮತ್ತು ಸಸಿ ನೆಡುವ ಕಾರ್ಯಕ್ರಮವನ್ನು ನೆರವೇರಿಸಲಾಯಿತು.

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ



ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ-ಆಪರೇಟಿವ್ ಲಿ., ಸಹಕಾರಿಯಲ್ಲಿ, ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರ ಅಧ್ಯಕ್ಷತೆಯಲ್ಲಿ, ಸಹಕಾರಿಯ ಸದಸ್ಯರು ಹಾಗೂ ಸಿಬ್ಬಂದಿಗಳ ಉಪಸ್ಥಿತಿಯಲ್ಲಿ, ಸೌಹಾರ್ದ ಸಹಕಾರಿ ದಿನ ಮತ್ತು ನೂತನ ವರ್ಷದ ಆಚರಣೆ ನಡೆಯಿತು.



ಶ್ರೀ ಕಾಳಿಕಾಂಬಾ ಸೌಹಾರ್ದ ಸಹಕಾರಿ ನಿ., ಬೆಂಗಳೂರು.



ವಾಮನಮೂರ್ತಿ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಚಿಕ್ಕಆಸಂಗಿ.



ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ., ಯಲಹಂಕ.



ಜೀವನಸ್ಫೂರ್ತಿ ಸೌಹಾರ್ದ ಸಹಕಾರಿ ನಿ., ಹಾವೇರಿ.



ಮಿಲ್ಲತ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಅಳ್ನಾವರ.



ಅಕ್ಕಮಹಾದೇವಿ ಮಹಿಳಾ ಪತ್ತಿನ ಸೌಹಾರ್ದ ಸಹಕಾರಿ ನಿ., ಹಿರೇಬಾಗೇವಾಡಿ.



ನಂ.561ನೇ ಕೊಡಗು ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಮಡಿಕೇರಿ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ.



ಶ್ರೀ ಗಾಯತ್ರಿ ಮಹಿಳಾ ಸೌಹಾರ್ದ ಪತ್ತಿನ ಸಹಕಾರಿ ನಿ., ಹುಳಿಯೂರು.



ವಾಸವಿ ಸೌಹಾರ್ದ ಪತ್ತಿನ ಸಹಕಾರಿ ನಿ., ಚಳ್ಳಕೆರೆ.



ಶ್ರೀ ರಾಮೇಶ್ವರ ಬಹು ಉದ್ದೇಶಿ ಸೌಹಾರ್ದ ಸಹಕಾರಿ ನಿ., ತೀರ್ಥಹಳ್ಳಿ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯಂದು ಸಹಕಾರಿ ಧ್ವಜಾರೋಹಣ ಕಾರ್ಯಕ್ರಮದ ನಂತರ ತೀರ್ಥಹಳ್ಳಿ ಸೊಪ್ಪುಗುಡ್ಡೆಯಲ್ಲಿರುವ ವಿಕಲಚೇತನ ಶಾಲೆಗೆ ತೆರಳಿ, ಅಲ್ಲಿರುವ ಮಕ್ಕಳಿಗೆ ಸಿಹಿ ಹಂಚಿ, ಪುಸ್ತಕ ವಿತರಿಸಲಾಯಿತು.



ಶ್ರೀ ರೇಣುಕಾದೇವಿ ಮಹಿಳಾ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯಂದು "ಸ್ವಚ್ಛತಾ ದಿನ"ವನ್ನು ಆಚರಿಸಲಾಯಿತು.



ಜಿಎಂ ಸೌಹಾರ್ದ ಪತ್ತಿನ ಸಹಕಾರಿ ನಿ., ದಾವಣಗೆರೆ ಸಹಕಾರಿಯ ವತಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಪ್ರಯುಕ್ತ ಸಾರ್ವಜನಿಕರಲ್ಲಿ ಸಹಕಾರ ಚಳುವಳಿ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ದಾವಣಗೆರೆ ನಗರದಲ್ಲಿನ ಪ್ರೌಢಶಾಲೆಗಳ ಹಾಗೂ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳಿಗೆ ಸ್ಥಳದಲ್ಲಿಯೇ ಚಿತ್ರ ಬಿಡಿಸುವ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ಹಾಗೂ ಸ್ಪರ್ಧೆಯಲ್ಲಿ ಉತ್ತಮ ಪ್ರತಿಭೆ ನಿರೂಪಿಸಿದ ವಿದ್ಯಾರ್ಥಿಗಳಿಗೆ ಬಹುಮಾನಗಳ ಜೊತೆಗೆ ಪ್ರಶಸ್ತಿ ಪತ್ರಗಳನ್ನು ವಿತರಿಸಲಾಯಿತು.

## ಶ್ರೀ ಮಹಾಯೋಗಿ ವೇಮನ ಜಯಂತಿ ಪ್ರಯುಕ್ತ ರಕ್ತದಾನ ಶಿಬಿರ



ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ., ಯಲಹಂಕ ಇವರಿಂದ ರೆಡ್ ಕ್ರಾಸ್ ಸಹಯೋಗದೊಂದಿಗೆ ದಿನಾಂಕ 21.01.2016 ರಂದು ಶ್ರೀ ಶ್ರೀ ಶ್ರೀ ಮಹಾಯೋಗಿ ವೇಮನ ಜಯಂತಿ ಪ್ರಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಲಹಂಕ ಇಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮವನ್ನು ಸ್ಥಳೀಯ ಶಾಸಕರಾದ ಶ್ರೀ ಎಸ್. ಆರ್.ವಿಶ್ವನಾಥ್‌ರವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಬಿ.ಬಿ.ಎಂ.ಪಿ ಕಾರ್ಪೋರೇಟರಾದ ಶ್ರೀಮತಿ ಚಂದ್ರಮ್ಮ ಕೆಂಪೇಗೌಡ, ಶ್ರೀ ಸತೀಶ್, ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು. ರಕ್ತದಾನ ಶಿಬಿರದಲ್ಲಿ ಸಂಯುಕ್ತ ಸಹಕಾರಿಯ ಅಧಿಕಾರಿಗಳಾದ ಶ್ರೀ ಶ್ರೀಕಾಂತ ಬರುವೆ, ಶ್ರೀ ರಘುನಂದನ್, ಶ್ರೀಮತಿ ಕೃತಿ ಜನಾರ್ಧನ್‌ರವರು ಭಾಗವಹಿಸಿದ್ದರು.

## ಸಂಯುಕ್ತ ಸಹಕಾರಿಯ ಸದಸ್ಯ ಸಹಕಾರಿ ಡೆಲಿಗೇಟ್‌ಗಳಿಗೆ ನೂತನ ಮಾದರಿ ಗುರುತಿನ ಚೀಟಿ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರ ಚುನಾವಣೆಯು ಈ ವರ್ಷಾಂತ್ಯದಲ್ಲಿ ನಡೆಯಬೇಕಿದ್ದು, ಚುನಾವಣೆಯಲ್ಲಿ ರಾಜ್ಯದ ಎಲ್ಲಾ ಅರ್ಹ ಸೌಹಾರ್ದ ಸಹಕಾರಿಗಳ ಡೆಲಿಗೇಟ್‌ಗಳು ಭಾಗವಹಿಸುತ್ತಾರೆ. ಚುನಾವಣೆಯಲ್ಲಿ ಭಾಗವಹಿಸಲು ಸಂಯುಕ್ತ ಸಹಕಾರಿಯು ವಿತರಿಸಿದ ಗುರುತಿನ ಚೀಟಿ ಕಡ್ಡಾಯವಾಗಿರುತ್ತದೆ.

ಈಗಾಗಲೇ ಅನೇಕ ಸಹಕಾರಿಗಳಿಗೆ ಗುರುತಿನ ಚೀಟಿ ನೀಡಿದ್ದು, ಕೆಲವು ಹಳೆಯ ಗುರುತಿನ ಚೀಟಿಗಳಲ್ಲಿನ ಭಾವಚಿತ್ರದ ಆಧಾರದಲ್ಲಿ ಡೆಲಿಗೇಟ್‌ಗಳನ್ನು ಗುರುತಿಸುವುದು ಕಷ್ಟ ಸಾಧ್ಯ. ಸಂಯುಕ್ತ ಸಹಕಾರಿಯು ಈ ಹಿಂದೆ ನೀಡಿದ ಗುರುತಿನ ಚೀಟಿಯ ಮಾದರಿಗೂ ಈಗ ನೀಡುತ್ತಿರುವ ಮಾದರಿಗೂ ವ್ಯತ್ಯಾಸವಿದೆ. ಆದ್ದರಿಂದ, ಗುರುತಿನ ಚೀಟಿಯಲ್ಲಿ ಏಕರೂಪತೆಯನ್ನು ತರುವ ಹಾಗೂ ಚುನಾವಣೆಯ ಸಂದರ್ಭದಲ್ಲಿ ಗೊಂದಲಕ್ಕೆ ಕಾರಣಾವಾಗಬಾರದೆಂಬ ಉದ್ದೇಶದಿಂದ ಎಲ್ಲಾ ಡೆಲಿಗೇಟ್‌ಗಳಿಗೂ ನೂತನ ಮಾದರಿಯ ಗುರುತಿನ ಚೀಟಿಗಳನ್ನು ನೀಡಲಾಗುತ್ತಿದೆ. ಈಗಾಗಲೇ ಗುರುತಿನ ಚೀಟಿ ಪಡೆದಿರುವ ಡೆಲಿಗೇಟ್‌ಗಳೂ ಸೇರಿದಂತೆ ಎಲ್ಲಾ ಡೆಲಿಗೇಟ್‌ಗಳು ಸಹ ಇತ್ತೀಚಿನ ಎರಡು ಭಾವಚಿತ್ರಗಳೊಂದಿಗೆ ಸಂಯುಕ್ತ ಸಹಕಾರಿಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ನಿಗದಿತ ನಮೂನೆಯಲ್ಲಿ ಸಂಯುಕ್ತ ಸಹಕಾರಿಗೆ ಕೋರಿಕೆ ಸಲ್ಲಿಸಿ ಗುರುತಿನ ಚೀಟಿ ಪಡೆಯಲು ಸೂಚಿಸಿದೆ. ಹೆಚ್ಚಿನ ವಿವರಗಳಿಗಾಗಿ ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.souharda.coopನ್ನು ಸಂಪರ್ಕಿಸುವುದು.



## ಶ್ರೀ ವಸಂತ ನಾಯಕರವರು ರಾಷ್ಟ್ರಮಟ್ಟದ ಸಲಹಾ ಸಮಿತಿ ಸದಸ್ಯರಾಗಿ ನೇಮಕ

ಶ್ರೀ ವಸಂತ ನಾಯಕ, ನಿರ್ದೇಶಕರು, ಪ್ರಾಂತೀಯ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಬೆಂಗಳೂರು ಇವರನ್ನು ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್, ಲಕ್ನೋ ಇವರು ನ್ಯಾಷನಲ್ ಕ್ಲೈಂಟ್ಸ್ ಕನ್ಸಲ್ಟೇಶನ್ ಕಮಿಟಿ ಸದಸ್ಯರಾಗಿ ನೇಮಕಗೊಳಿಸಿದ್ದಾರೆ. ಸಂಯುಕ್ತ ಸಹಕಾರಿಯ ಅಧ್ಯಕ್ಷರು ಹಾಗೂ ಆಡಳಿತ ಮಂಡಲಿಯವರು ಮತ್ತು ಸಿಬ್ಬಂದಿಯವರು ಶ್ರೀ ವಸಂತ ನಾಯಕರವರನ್ನು ಅಭಿನಂದಿಸಿದ್ದಾರೆ.

ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ ಲಿ., ಕಾರವಾರ ಇದರ ನೂತನ 30ನೇ ಶಾಖೆಯು ಉಡುಪಿಯ ಹೃದಯ ಭಾಗದಲ್ಲಿ ದಿನಾಂಕ 03.01.2016ರಂದು ಸಂಜೆ 3.30 ಗಂಟೆಗೆ ಕೆ.ಎಮ್. ಮಾರ್ಗದ ಲಂಡನ್ ಪ್ಲಾಜಾದಲ್ಲಿ ವಂದನೀಯ ಫಾ। ಫ್ರೆಡ್ರಿಕ್ ಮಸ್ಕರೇನಸ್‌ರವರ ಆಶೀರ್ವಚನ ಹಾಗೂ ಸನ್ಮಾನ್ಯ ಸಂಸತ್ ಸದಸ್ಯರು ಹಾಗೂ ಮಾಜಿ ಕೇಂದ್ರ ಸಚಿವರಾದ ಶ್ರೀ ಆಸ್ಕರ ಫರ್ನಾಂಡಿಸ್ ಇವರ ಅಮೃತ ಹಸ್ತದಿಂದ ಉದ್ಘಾಟನೆಯು ನೆರವೇರಿತು.





ರಾಯಚೂರು ಸೌಹಾರ್ದ ಪತ್ತಿನ ಸಹಕಾರಿ ನಿ., ಕವಿತಾಳ ಸಹಕಾರಿಯ ಕ್ಯಾಲೆಂಡರ್ ಅನಾವರಣ.



ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ ಬ್ಯಾಂಕಿನ ಕ್ಯಾಲೆಂಡರ್ ಬಿಡುಗಡೆಯನ್ನು ದಿ : 23.12.2015 'ರೈತ ದಿನ'ದಂದು ಬ್ಯಾಂಕಿನ ಎಲ್ಲಾ ಶಾಖೆಗಳಲ್ಲಿ ಬಿಡುಗಡೆ ಮಾಡಲಾಯಿತು. ಆಯಾ ಶಾಖೆಯ ವ್ಯಾಪ್ತಿಗೆ ಬರುವ ಸಹಾಯಕ ಕೃಷಿ ನಿರ್ದೇಶಕರು, ಉಪ ಕೃಷಿ ನಿರ್ದೇಶಕರು ಮುಖ್ಯ ಅತಿಥಿಗಳಾಗಿ ಹಾಗೂ ಪ್ರಗತಿಪರ ರೈತರನ್ನೂ ಕರೆಸಿ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು.

## ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್‌ನಲ್ಲಿ ಎರಡು ದಿನಗಳ ವಿಶೇಷ ತರಬೇತಿ ಕಾರ್ಯಾಗಾರ




ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್ ಲಿ., ಸಹಕಾರಿಯು ದಿನಾಂಕ : 24 ಮತ್ತು 25 ಡಿಸೆಂಬರ್ 2015ರಂದು ಆರ್.ಐ.ಸಿ.ಎಂ. ಪದ್ಮನಾಭನಗರ, ಬೆಂಗಳೂರು ಇಲ್ಲಿ ಆಡಳಿತ ಮಂಡಲಿ ನಿರ್ದೇಶಕರು, ಶಾಖಾ ಸಮಿತಿ ನಿರ್ದೇಶಕರು ಹಾಗೂ ಸದಸ್ಯರುಗಳಿಗೆ ಎರಡು ದಿನಗಳ ವಿಶೇಷ ತರಬೇತಿ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ಶ್ರೀ ವಸಂತ ನಾಯ್ಕ್, ಶ್ರೀ ವಿ.ಜೆ.ಕಾರಕೂನ, ಶ್ರೀ ಕಾಂತರಾಜು ಮತ್ತು ಶ್ರೀ ನವೀನ್ ಇವರ ನೇತೃತ್ವದಲ್ಲಿ ದೀಪ ಬೆಳಗಿಸುವುದರ ಮೂಲಕ ವಿಶೇಷ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು.



## ನಂದನ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಪುತ್ತೂರು

ಸ್ವಾಮಿ ವಿವೇಕಾನಂದ ಜಯಂತಿ ಮತ್ತು ಸೌಹಾರ್ದ ಸಹಕಾರಿ ದಿನದ ಅಂಗವಾಗಿ ನಂದನ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಪುತ್ತೂರು, ಜೈಂಟ್ಸ್ ಗ್ರೂಪ್ ಆಫ್ ಪುತ್ತೂರು ಮತ್ತು ರೋಟರಿ ಕ್ಯಾಂಪ್ಕೋ ಬ್ಲಡ್‌ಬ್ಯಾಂಕ್, ಪುತ್ತೂರು ಇವರುಗಳ ಜಂಟಿ ಆಶ್ರಯದಲ್ಲಿ "2ನೇ ವರ್ಷದ ರಕ್ತದಾನ ಶಿಬಿರ"ವು ಸಹಕಾರಿಯ ಪ್ರಧಾನ ಕಛೇರಿಯಲ್ಲಿ ನಡೆಯಿತು.

## ಸಂಯುಕ್ತ ಸಹಕಾರಿಗೆ ರಾಷ್ಟ್ರೀಯ ಸಹಕಾರ ಯೂನಿಯನ್‌ನ ಸದಸ್ಯತ್ವ



भारतीय राष्ट्रीय सहकारी संघ

NATIONAL COOPERATIVE UNION OF INDIA
(APEX ORGANISATION OF THE INDIAN COOPERATIVE MOVEMENT)

Ref. No. NCUI/CDN/31(2)/2015-2016 Dated 14.01.2016

The Chairman,
Karnataka State Souharda Federation Cooperative Ltd.,
Nirman Bhavan, Dr. Raj Kumar Road,
Ist Block Rajaji Nagar, Bengaluru, 560010
Karnataka.

**Sub: Membership of NCUI-regarding**

Dear Sir,

With reference to your application on the above noted subject, we are pleased to inform you that as per the decision of the Governing Council in its 175th Meeting held on 19.12.2015 the Karnataka State Souharda Federation Cooperative Ltd., has been admitted as member of National Cooperative Union of India in accordance with relevant provisions of bye-law no.4(a)(iv) of the Union with immediate effect and your membership no. is **328**.

Thanking you.

Yours faithfully,

**(Dr. Dinesh)**
Chief Executive

3, Siri Institutional Area, August Kranti Marg, New Delhi-110016
Phones : 26861472, 26565146 Fax : 011-26863248, 011-26868350
E-Mail : mailncui@india.coop, ncuidel@ndb.vsnl.net.in
Website : www.ncui.coop

ದೇಶದ ಸಹಕಾರಿ ಕ್ಷೇತ್ರದ ಮಾತೃಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿರುವ ರಾಷ್ಟ್ರೀಯ ಸಹಕಾರಿ ಯೂನಿಯನ್ ನಲ್ಲಿ ಕರ್ನಾಟಕದ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳನ್ನು ಗುರುತಿಸಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಗೆ ಸದಸ್ಯತ್ವ ನೀಡಲಾಗಿದೆ.



**ಶ್ರೀ ಬಿ ಪುಟ್ಟಶಾಮಪ್ಪ**
ಅಧ್ಯಕ್ಷರು



**ಶ್ರೀ ವೀರೇಶ್**
ಉಪಾಧ್ಯಕ್ಷರು

ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾಗಿ ಶ್ರೀ ಬಿ ಪುಟ್ಟಶಾಮಪ್ಪ ಹಾಗೂ ಉಪಾಧ್ಯಕ್ಷರಾಗಿ ಶ್ರೀ ವೀರೇಶ್ ಸರ್ವಾನುಮತದಿಂದ ಆಯ್ಕೆಯಾಗಿರುತ್ತಾರೆ. ಶ್ರೀಯುತರುಗಳಿಗೆ ಸಹಕಾರಿಯ ಆಡಳಿತ ಮಂಡಲಿಯವರು ಹಾಗೂ ಸಿಬ್ಬಂದಿ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.

## ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಉಡುಪಿ, ವಂದೇ ಮಾತರಂ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕುಂದಾಪುರ ಮತ್ತು ಹಂಸ ಚೈತನ್ಯ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಉಡುಪಿ ಇವರ ಸಹಭಾಗಿತ್ವದಲ್ಲಿ ಜಿಲ್ಲಾ ಸಹಕಾರಿಗಳಿಗೆ ತರಬೇತಿ ಕಾರ್ಯಾಗಾರ

ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಉಡುಪಿ, ವಂದೇ ಮಾತರಂ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕುಂದಾಪುರ ಮತ್ತು ಹಂಸ ಚೈತನ್ಯ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಉಡುಪಿ ಇವರ ಸಹಭಾಗಿತ್ವದಲ್ಲಿ ಜಿಲ್ಲಾ ಸಹಕಾರಿಗಳಿಗೆ ತರಬೇತಿ ಕಾರ್ಯಾಗಾರವು ದಿನಾಂಕ 09.01.2016ರಂದು ಉಡುಪಿಯ ಹೋಟೇಲ್ ನೈವೇದ್ಯದ ಅನುಗ್ರಹ ಸಭಾಂಗಣದಲ್ಲಿ ನಡೆಯಿತು.

ಸಮಾರಂಭದ ಉದ್ಘಾಟನೆಯನ್ನು ಶ್ರೀ ರಾಜು ಪೂಜಾರಿ, ಅಧ್ಯಕ್ಷರು, ಶ್ರೀ ರಾಮ ಸೌಹಾರ್ದ ಸಹಕಾರಿ ಮತ್ತು ನಿರ್ದೇಶಕರು, ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಇವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸೌಹಾರ್ದ ಸಹಕಾರಿ ಒಕ್ಕೂಟದ ಅಧ್ಯಕ್ಷರಾದ ಶ್ರೀ ಮಂಜುನಾಥ ಎಸ್.ಕೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ತೆರಿಗೆ ಇಲಾಖೆ ಮಂಗಳೂರಿನ ಅಧಿಕಾರಿಗಳಾದ ಶ್ರೀ ಸುಬ್ರಾಯ ಪ್ರಭು ರವರು ತೆರಿಗೆಯ ಬಗ್ಗೆ, ಶ್ರೀಮತಿ ಡಾ. ಸುಧಾ ಕೆ. ರವರು ವೃತ್ತಿಪರ ನಿರ್ವಹಣೆ ಬಗ್ಗೆ ಮತ್ತು ಶ್ರೀ ಕೆ.ಆರ್ ರೋಹಿತ್, ಎಸ್.ಡಿ.ಎ, ಸಹಕಾರಿಗಳ ಉಪನಿಬಂಧಕರ ಕಛೇರಿ, ರಜತಾದ್ರಿ, ಮಣಿಪಾಲ ಇವರು ಚುನಾವಣೆಯ ಬಗ್ಗೆ ತರಬೇತಿಯನ್ನು ನೀಡಿದರು. ಕಾರ್ಯಕ್ರಮದ ಸಮಾರೋಪ



ಸಮಾರಂಭದಲ್ಲಿ ಮಾತನಾಡಿದ ಶ್ರೀ ಭಾಸ್ಕರ ಕಾಮತ್, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ತರಬೇತಿ ಕಾರ್ಯಕ್ರಮ ಇದ್ದಲ್ಲಿ ಮಾತ್ರ ಸಹಕಾರಿಗಳು ಮುನ್ನಡೆಯಲು ಸಾಧ್ಯ ಎಂದು ತಿಳಿಸಿದರು. ಶ್ರೀ ಬಿ. ಮಧುಸೂದನ ನಾಯಕ್, ಉಪಾಧ್ಯಕ್ಷರು, ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ಇವರು ಮಾತನಾಡಿ ಸಹಕಾರಿಗಳು ಮುನ್ನಡೆಯಲು ಮುಖ್ಯಕಾರ್ಯನಿರ್ವಾಹರಲ್ಲದೇ ಸಿಬ್ಬಂದಿಗಳ ಪಾತ್ರವೂ ಮುಖ್ಯ ಎಂದರು. ಕಾರ್ಯಕ್ರಮವನ್ನು ಶ್ರೀ ಪ್ರದೀಪ.ಕೆ, ಕಾರ್ಯದರ್ಶಿ, ನಿರ್ಮಾಣ್ ವಿವಿಧೋದ್ದೇಶ ಸೌಹಾರ್ದ ಸಹಕಾರಿ, ಉಡುಪಿ ಇವರು ನಡೆಸಿಕೊಟ್ಟರು. ಸ್ವಾಗತವನ್ನು ಶ್ರೀ ಶಿವಮೂರ್ತಿ ಭಂಡಾರ್ಕಾರ್, ಅಧ್ಯಕ್ಷರು, ವಂದೇಮಾತರಂ ವಿವಿಧೋದ್ದೇಶ ಸೌಹಾರ್ದ ಸಹಕಾರಿ, ಕುಂದಾಪುರ ಇವರು ನೆರವೇರಿಸಿದರು.

## ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ (ರಿ.) ಪುತ್ತೂರು ವತಿಯಿಂದ "ಹಾವು–ನಾವು ಮತ್ತು ಪರಿಸರ" ಪ್ರಾತ್ಯಕ್ಷಿಕೆ, ಉಪನ್ಯಾಸ ಮತ್ತು ಪ್ರಶ್ನೋತ್ತರ ಕಾರ್ಯಕ್ರಮ



ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತದ ಸಹಸಂಸ್ಥೆಯಾದ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ (ರಿ.) ಪುತ್ತೂರು ಇದರ ಆಶ್ರಯದಲ್ಲಿ ಬೆಳ್ಳಾರೆಯ ಪ್ರೌಢ ಶಾಲಾ ಹಾಗೂ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗಾಗಿ "ಹಾವು–ನಾವು ಮತ್ತು ಪರಿಸರ" ಪ್ರಾತ್ಯಕ್ಷಿಕೆ, ಉಪನ್ಯಾಸ ಮತ್ತು ಪ್ರಶ್ನೋತ್ತರ ಕಾರ್ಯಕ್ರಮವು ದಿನಾಂಕ 18.01.2016ರಂದು ಸರಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಬೆಳ್ಳಾರೆಯಲ್ಲಿ ನಡೆಯಿತು. ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಹಿರಿಯ ಉಪನ್ಯಾಸಕರಾದ ಶ್ರೀ ಪ್ರಭಾಕರ ಕಿರಿಭಾಗ ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀ ಅಜಿತ್ ರಾವ್ ಕೆ. ನೆರವೇರಿಸಿದರು.



ಶ್ರೀ ವಿನಾಯಕ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಸಿದ್ಧಾಪುರ ಸಹಕಾರಿಯ ಶಿರಸಿ ಶಾಖೆಯ ಪ್ರಾರಂಭ.

## ಸಿದ್ಧಿವಿನಾಯಕ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ ಸಹಕಾರಿಯ ದಶಮಾನೋತ್ಸವ ಅಂಗವಾಗಿ ಗ್ರಾಮೀಣ ವಿಭಾಗದ ಕಾಲೇಜು ವಿದ್ಯಾರ್ಥಿಗಳಿಗಾಗಿ ವ್ಯಕ್ತಿತ್ವ ವಿಕಸನ ಹಾಗೂ ವೃತ್ತಿ ಮಾರ್ಗದರ್ಶನ ತರಬೇತಿ ಕಾರ್ಯಕ್ರಮ

ಸಿದ್ಧಿವಿನಾಯಕ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ ಸಹಕಾರಿಯು ತನ್ನ ದಶಮಾನೋತ್ಸವದ ಅಂಗವಾಗಿ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ ಇವರ ಸಹಯೋಗದೊಂದಿಗೆ ದಿನಾಂಕ 16.01.2016ರಂದು ಗ್ರಾಮೀಣ ವಿಭಾಗದ ಕಾಲೇಜು ವಿದ್ಯಾರ್ಥಿಗಳಿಗಾಗಿ ವ್ಯಕ್ತಿತ್ವ ವಿಕಸನ ಹಾಗೂ ವೃತ್ತಿ ಮಾರ್ಗದರ್ಶನ ವಿಷಯದ ತರಬೇತಿ ಕಾರ್ಯಕ್ರಮವನ್ನು ಕೇಂದ್ರೀಯ ವಿಶ್ವವಿದ್ಯಾಲಯದ ಆವರಣದಲ್ಲಿ ಹಮ್ಮಿಕೊಂಡಿದ್ದರು. ಕಾರ್ಯಕ್ರಮವನ್ನು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ ಕುಲಪತಿಗಳಾದ ಡಾ. ಎಚ್.ಎಂ.ಮಹೇಶ್ವರಯ್ಯ ಅವರು ದೀಪ ಬೆಳಗಿಸುವುದರೊಂದಿಗೆ ಉದ್ಘಾಟಿಸಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಖ್ಯಾತ ಜಾನಪದ ಸಾಹಿತಿಗಳು, ಕಲಬುರಗಿ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರಾದ ಡಾ.ವೀರಣ್ಣ ದಂಡೆಯವರು ಅಧ್ಯಕ್ಷೀಯ ನುಡಿಗಳನ್ನಾಡುತ್ತಾ, ಸಿದ್ಧಿವಿನಾಯಕ ಸೌಹಾರ್ದ ಸಹಕಾರಿಯ ಸಾಮಾಜಿಕ ಕಳಕಳಿಯನ್ನು ಶ್ಲಾಘಿಸಿದರು. ಮುಖ್ಯ ಅತಿಥಿಗಳಾಗಿ



ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕಲಾ ನಿಕಾಯದ ಡೀನರಾದ ಡಾ.ಶಿವಗಂಗಾ ರುಮ್ಮಾ ಆಗಮಿಸಿದ್ದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಸಂಜೀವ ಮಹಾಜನರವರು ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಗಳನ್ನು ಹಾಗೂ ಉಪಾಧ್ಯಕ್ಷರಾದ ಶ್ರೀ ಎಸ್. ಎಸ್.ಪಾಟೀಲ ರವರು ವಂದನಾರ್ಪಣೆಯನ್ನು ಮಾಡಿದರು. ನಂತರ ಡಾ. ನಂದೀಶ ಹಿರೇಮಠ, ಪ್ರಾಧ್ಯಾಪಕರು, ಇಂಡಸ್ ಬಿಸಿನೆಸ್ ಅಕಾಡೆಮಿ, ಬೆಂಗಳೂರು ಇವರು ವಿದ್ಯಾರ್ಥಿಗಳಿಗೆ ತರಬೇತಿ ಕಾರ್ಯಕ್ರಮವನ್ನು ನೀಡಿದರು.

## ಸೌಹಾರ್ದ ಸಹಕಾರಿಗಳಿಗೆ ಚುನಾವಣೆ : ಮುಖ್ಯ ಕಾರ್ಯನಿರ್ವಾಹಕರಿಗೆ ಪಾರದರ್ಶಕ ಪಾತ್ರ ನಿರ್ವಹಣೆ ಹಾಗೂ ಚುನಾಯಿತರಾಗುವ ನೂತನ ಆಡಳಿತ ಮಂಡಳಿಗೆ ಬದ್ಧತೆ ಹಾಗೂ ಪ್ರಾಮಾಣಿಕ ಸೇವೆಯ ಪ್ರಮಾಣ ವಚನ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಮಾದರಿ


ರಾಜ್ಯದ ಬಹುತೇಕ ಸೌಹಾರ್ದ ಸಹಕಾರಿಗಳಿಗೆ ಚುನಾವಣೆಗಳು ನಡೆಯುವ ಈ ಸಂದರ್ಭದಲ್ಲಿ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ಪಾತ್ರ ಅತ್ಯಂತ ಮಹತ್ವದ್ದೆಂದು ವಿಶ್ಲೇಷಿಸಲಾಗಿದೆ. ಸಹಕಾರಿಯ ಮತದಾರರ ಪಟ್ಟಿ ಸಿದ್ಧಪಡಿಸುವಿಕೆ, ಮತದಾರರಿಗೆ ಗುರುತಿನ ಚೀಟಿ ವಿತರಿಸುವಿಕೆ ಚುನಾವಣಾ ಪ್ರಕ್ರಿಯೆ ಮುಗಿಯುವವರೆಗೂ ಚುನಾವಣಾ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವಲ್ಲಿ ಮುಖ್ಯ ಕಾರ್ಯನಿರ್ವಾಹಕರುಗಳು ನಿಷ್ಠೆ, ದಕ್ಷತೆ ಹಾಗೂ ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯಿಂದ ಕಾರ್ಯನಿರ್ವಹಿಸುವುದು ಅಗತ್ಯ.

ಅದೇ ರೀತಿ ಚುನಾಯಿತ ನೂತನ ಆಡಳಿತ ಮಂಡಲಿಯವರು ಸಹಕಾರಿಯ ಆಡಳಿತ ಸೂತ್ರವನ್ನು ಹಿಡಿಯುವವರು ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಹೆಚ್ಚಿನ ಜ್ಞಾನವನ್ನು ಪಡೆದುಕೊಳ್ಳುವ ಪ್ರಯತ್ನ, ಕಾರ್ಯಕ್ರಮಗಳಿಗೆ ಬದ್ಧತೆ, ನಿಷ್ಠೆ ಹಾಗೂ ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸುವ ಬಗ್ಗೆ ಪ್ರಮಾಣವಚನ ಸ್ವೀಕರಿಸುವುದು ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಮಾದರಿ. ಆಡಳಿತ ಮಂಡಲಿಯವರು ಹೆಚ್ಚು ಕ್ರಿಯಾಶೀಲರಾಗಿ ಪರಿಣಿತಿಯಿಂದ, ವೃತ್ತಿಪರತೆಯಿಂದ, ಪಾರದರ್ಶಕವಾಗಿ ಕಾರ್ಯನಿರ್ವಹಿಸುವ ಅಗತ್ಯತೆಯಿರುವುದರಿಂದ ಈ ರೀತಿಯ ಪ್ರಮಾಣ ವಚನ ಕಾರ್ಯ ಹಮ್ಮಿಕೊಳ್ಳುವುದು ಅಗತ್ಯ. ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಸಹಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕರು ಈ ಬಗ್ಗೆ ಕ್ರಮವಿಡುವಿರಾಗಿ ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ. ಈ ಬಗ್ಗೆ ಸೌಹಾರ್ದ ಸಹಕಾರಿಗಳ ಸಲಹೆ ಹಾಗೂ ಮಾರ್ಗದರ್ಶನಗಳನ್ನು ಸ್ವಾಗತಿಸುತ್ತದೆ.

**ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ**
ಚಂದ್ರಾ ಬಡಾವಣೆ, ಬೆಂಗಳೂರು.



ಶ್ರೀ ಟಿ.ಎಚ್. ಕರಿಯಪ್ಪ
ಅಧ್ಯಕ್ಷರು



ಶ್ರೀ ಎಸ್.ಪಿ. ಪುಟ್ಟಸ್ವಾಮಿ
ಉಪಾಧ್ಯಕ್ಷರು

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲು ನಿರ್ಧರಿಸಲಾಗಿದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ

– ಸಂಪಾದಕರು

# ನಿಮ್ಮ ಪ್ರಶ್ನೆ




# ನಮ್ಮ ಉತ್ತರ

– ಶ್ರೀಕಾಂತ ಬರುವೆ
ಸಹ ಪ್ರಧಾನ ವ್ಯವಸ್ಥಾಪಕರು,
ಕ.ರಾ.ಸೌ.ಸಂ.ಸ.ನಿ.,

**1. ಬಂಗಾರ ಆಭರಣಗಳ ಮೇಲೆ ಸಾಲ ನೀಡುವಾಗ ಎಷ್ಟು ಮೊತ್ತದ ಮೇಲೆ ಸ್ಟ್ಯಾಂಪ್ ಡ್ಯೂಟಿ ಪಾವತಿಸಬೇಕು?**

**ಉತ್ತರ** : ಕರ್ನಾಟಕ ಸ್ಟ್ಯಾಂಪ್ ಅಧಿನಿಯಮ, 1957ರ ಆರ್ಟಿಕಲ್ 6(2)ರನ್ವಯ ಒಂದು ಲಕ್ಷ ರೂ.ಗಳವರೆಗೆ ಆಭರಣಗಳ ಒತ್ತೆ ಸಾಲಕ್ಕೆ ಮುದ್ರಾಂಕ ಶುಲ್ಕದಿಂದ ವಿನಾಯಿತಿ ಇರುತ್ತದೆ. ಆದರೆ, ಒಂದು ಲಕ್ಷದ ಮೇಲ್ಪಟ್ಟ ಒತ್ತೆ ಸಾಲಕ್ಕೆ ಸಾಲದ ಮೊತ್ತದ ಶೇ.0.1 ಪ್ರತಿಶತ ಮುದ್ರಾಂಕ ಶುಲ್ಕವನ್ನು ಪಾವತಿಸಬೇಕಿರುತ್ತದೆ. ಆದರೆ ಸದರಿ ಮುದ್ರಾಂಕ ಶುಲ್ಕ ಗರಿಷ್ಠ ರೂ.50,000/– ಆಗಿರುತ್ತದೆ.

**2. ಒಂದೇ ದಿನ ಒಬ್ಬ ವ್ಯಕ್ತಿಯು 3 ಬಾರಿ ಬಂಗಾರ ಸಾಲ ಪಡೆಯುತ್ತಿದ್ದು ಕ್ರಮವಾಗಿ ರೂ.85,000/–, ರೂ.90,000/– ಮತ್ತು ರೂ.35,000/– ಹೀಗೆ ಒಟ್ಟು ರೂ.2,10,000/– ಸಾಲ ಪಡೆಯುತ್ತಾನೆ. ಎಷ್ಟು ಸ್ಟ್ಯಾಂಪ್ ಡ್ಯೂಟಿ ಪಾವತಿಸಬೇಕು?**

**ಉತ್ತರ** : ಒಬ್ಬನೇ ವ್ಯಕ್ತಿಯು ಒಂದೇ ದಿನ ಮೂರು ಬಾರಿ ಒತ್ತೆ ಸಾಲವನ್ನು ಪಡೆದಿದಾಗ್ಯೂ ಸಹ ಸಾಲದ ಮೊತ್ತವು ಒಂದು ಬಾರಿಗೆ ಒಂದು ಲಕ್ಷವನ್ನು ಮೀರದಿರುವ ಹಿನ್ನೆಲೆಯಲ್ಲಿ ಮೇಲೆ ತಿಳಿಸಿದಂತೆ ಮುದ್ರಾಂಕ ಶುಲ್ಕದಿಂದ ವಿನಾಯಿತಿ ಲಭ್ಯವಾಗುತ್ತದೆ.

**3. ಒಬ್ಬ ವ್ಯಕ್ತಿಯು ಬೇರೇ ಬೇರೇ ದಿನದೆಂದು ರೂ. 85,000/–, ರೂ. 90,000/– ಮತ್ತು ರೂ.35,000/– ಬಂಗಾರ ಸಾಲ ಪಡೆಯುತ್ತಾನೆ ಎಷ್ಟು ಸ್ಟ್ಯಾಂಪ್ ಡ್ಯೂಟಿ ಲಗತ್ತಿಸಬೇಕು? ಸ್ಟ್ಯಾಂಪ್ ಡ್ಯೂಟಿ ಪಾವತಿಸಬೇಕಾದಲ್ಲಿ ಅದರ ಪ್ರಮಾಣಗಳನ್ನು ತಿಳಿಸಿ.**

**ಉತ್ತರ** : ಒಬ್ಬನೇ ವ್ಯಕ್ತಿಯು ಬೇರೆ ಬೇರೆ ದಿನ ಮೂರು ಬಾರಿ ಒತ್ತೆ ಸಾಲವನ್ನು ಪಡೆದಿದಾಗ್ಯೂ ಸಹ ಸಾಲದ ಮೊತ್ತವು ಒಂದು ಬಾರಿಗೆ ಒಂದು ಲಕ್ಷವನ್ನು ಮೀರದಿರುವ ಹಿನ್ನೆಲೆಯಲ್ಲಿ ಮೇಲೆ ತಿಳಿಸಿದಂತೆ ಮುದ್ರಾಂಕ ಶುಲ್ಕದಿಂದ ವಿನಾಯಿತಿ ಲಭ್ಯವಾಗುತ್ತದೆ.

**4. ರೂ. 1,00,000/– ದವರೆಗೆ ಬಂಗಾರ ಆಭರಣಗಳ ಮೇಲೆ ಸ್ಟ್ಯಾಂಪ್ ಡ್ಯೂಟಿ ವಿನಾಯಿತಿ ಇರುತ್ತದೆ, ಆದರೆ ಒಬ್ಬ ವ್ಯಕ್ತಿಯು ರೂ.2,00,000/– ಸಾಲ ಪಡೆಯುವಾಗ ಸ್ಟ್ಯಾಂಪ್ ಡ್ಯೂಟಿ ರೂ. 2,00,000/– ಮೇಲೆ ಪಡೆಯಬೇಕೋ? ಅಥವಾ ಹೆಚ್ಚಿನ ರೂ. 1,00,000/– ಮೇಲಿನ ಸಾಲಕ್ಕೆ ಸ್ಟ್ಯಾಂಪ್ ಡ್ಯೂಟಿ ಪಡೆಯಬೇಕೋ?**

**ಉತ್ತರ** : ಕರ್ನಾಟಕ ಸ್ಟ್ಯಾಂಪ್ ಅಧಿ ನಿಯಮ, 1957 ರಲ್ಲಿ ಮಾರ್ಜಿನಲ್ ಸ್ಟ್ಯಾಂಪ್ ಶುಲ್ಕ ಕುರಿತು (Marginal Stamp Duty) ಹೇಳದೆ ಇರುವುದರಿಂದ ಪೂರ್ಣ ಎರಡು ಲಕ್ಷ ರೂಪಾಯಿಗಳಿಗೆ ಸ್ಟ್ಯಾಂಪ್ ಶುಲ್ಕವನ್ನು ಪಾವತಿಸಬೇಕಾಗಿರುತ್ತದೆ.

**5. ಸ್ಟ್ಯಾಂಪ್ ಡ್ಯೂಟಿ ಲಗತ್ತಿಸಲ್ಲದ ಪಕ್ಷದಲ್ಲಿ ಭವಿಷ್ಯದಲ್ಲಿ ಯಾವ ಪರಿಣಾಮಗಳು ಉಂಟಾಗಬಹುದು?**

**ಉತ್ತರ** : ಕರ್ನಾಟಕ ಸ್ಟ್ಯಾಂಪ್ ಅಧಿನಿಯಮ, 1957ರನ್ವಯ ಸ್ಟ್ಯಾಂಪ್ ಶುಲ್ಕ ಪಾವತಿಸದಿರುವ ಸಂದರ್ಭದಲ್ಲಿ ಕರ್ನಾಟಕ ಸ್ಟ್ಯಾಂಪ್ ಅಧಿನಿಯಮ, 1957ರ ಕಲಂ 59, 59–ಎ, 59–ಬಿ, 61, 62, 63, 63–ಎ, 64ರಲ್ಲಿ ತಿಳಿಸಿರುವಂತೆ ಕ್ರಿಮಿನಲ್ ವ್ಯವಹರಣೆಗೆ ಒಳಗಾಗಬೇಕಾಗುತ್ತದೆ.

**6. ಬಂಗಾರ ಆಭರಣಗಳ ಸಾಲ ಹೊರತು ಪಡಿಸಿ ಬೇರೆ ಯಾವುದೇ ಸಾಲಗಳ ಮೇಲೆ (ಠೇವು ಸಾಲ ಹೊರತುಪಡಿಸಿ) ಅಂದರೆ, ವೈಯಕ್ತಿಕ ಸಾಲ, ಒತ್ತೆ ಸಾಲ, ವಾಹನ ಸಾಲ, ಕ್ಯಾಶ್ ಕ್ರೆಡಿಟ್ ಇತ್ಯಾದಿ, ಇದರ ಸಾಲಗಳ ಮೇಲೆ ಸ್ಟ್ಯಾಂಪ್ ಡ್ಯೂಟಿ ಪಾವತಿಸಬೇಕಾ?**

**ಉತ್ತರ** : ಡಿಪಾಸಿಟ್ ಆಫ್ ಟೈಟಲ್ ಡೀಡ್ಸ್ ಮಾಡಿಕೊಂಡು ನೀಡಿರುವ ಅಡಮಾನ ಸಾಲಕ್ಕೆ, ನೋಂದಾಯಿತ ಅಡಮಾನ ಸಾಲಕ್ಕೆ, ವಾಹನ ಸಾಲಕ್ಕೆ, ಒತ್ತೆ ಸಾಲಕ್ಕೆ ಸಾಲದ ಮೊತ್ತದ ಶೇ.0.1% ಸ್ಟ್ಯಾಂಪ್ ಶುಲ್ಕ ಪಾವತಿಸತಕ್ಕದ್ದು. ಸಹಕಾರಿಯಲ್ಲಿ ಸದಸ್ಯನು ಹೊಂದಿರುವ ಠೇವಣಿಯನ್ನು ಲೀನ್ ಮಾಡಿ ಅದೇ ಸದಸ್ಯನು ಸಾಲವನ್ನು ಪಡೆದಲ್ಲಿ ಸ್ಟ್ಯಾಂಪ್ ಶುಲ್ಕ ಪಾವತಿಸಬೇಕಿರುವುದಿಲ್ಲ.



# RBI - NEWS JANUARY 2016

K.Vittal Shetty

**Sixth Bi-monthly Monetary Policy Statement, 2015-16 announced By Dr. Raghuram G. Rajan, Governor on 2 February 2016. There are no changes in Policy Rates. Consequently, the reverse repo rate under the LAF will remain unchanged at 5.75 per cent, and the marginal standing facility (MSF) rate and the Bank Rate at 7.75 per cent. The first bi-monthly monetary policy statement for 2016-17 will be announced on Tuesday, April 5, 2016.**

## I. IMPORTANT NEWS

**December 31, 2015 :** Roadmap for opening brick and mortar branches in villages with population more than 5000 without a bank branch of a scheduled commercial bank SLBC Convenor banks were advised on June 19, 2012 to prepare a roadmap to provide banking services in all unbanked villages with population less than 2000 through a combination of business correspondents (BCs) and branches. Banks were also advised to ensure that there is a brick and mortar branch to provide support to a cluster of BC units at a reasonable distance of 3-4 kilometres. In February 2013. Further, keeping in view the ongoing implementation of Pradhan Mantri Jan Dhan Yojana (PMJDY), SLBC Convenor banks and lead banks were advised on January 2, 2015 to complete the process of providing banking services in unbanked villages with population below 2000 by August 14, 2015.

For increasing banking penetration and financial inclusion, brick and mortar branches are an integral component. Therefore, it has been decided to focus on villages with population above 5000 without a bank branch of a scheduled commercial bank. SLBC Convenor banks are advised to identify villages with population above 5000 without a bank branch of a scheduled commercial bank in their State. The identified villages may be allotted among scheduled commercial banks (including Regional Rural Banks) for opening of branches. The opening of bank branches under this Roadmap should be completed by March 31, 2017.

**Jan 04, 2016 : RBI releases Primary (Urban) Co-operative Banks' Outlook 2014-15**

The 2nd volume of the annual publication titled 'Primary (Urban) Co-operative Banks' Outlook 2014-15'. The publication covers the financial accounts of Scheduled and Non-Scheduled Primary (Urban) Co-operative Banks for the financial year 2014-15. It provides information on major items of balance sheet, profit and loss account, non-performing assets, financial ratios, state-wise distribution of offices and details of priority sector advances. The publication is being brought out only in electronic form on an annual basis on the Reserve Bank's website through the Database on Indian Economy (DBIE).There will be no hard copies of the publication.

**Jan 11, 2016 : Composition and Ownership Pattern of Deposits with Scheduled Commercial Banks: March 2015 – Data Release**

**Highlights :**

- Total deposits (including interbank-deposits) of all scheduled commercial banks increased by 10.4 per cent to 89,727 billion as on March 31, 2015. Current, savings and term deposits comprised 9.3 per cent, 25.6 per cent and 65.1 per cent, respectively, of the total deposits.
- Bank group-wise, public sector banks accounted for the largest share (73.2 per cent) in total deposits in March 2015 followed by private sector banks (19.9 per cent).
- A detailed article analysing the broad trends across type of deposit accounts, institutional sectors, population groups and bank groups as on March 31, 2015 is being published in the February 2016 issue of the RBI Bulletin.

**Jan 14, 2016:Direct Benefit Transfer (DBT) Scheme - Seeding of Aadhaar in Bank Accounts - Clarification**

In view of the Hon'ble Supreme Court of India's interim orders dated August 11, 2015 and October 15, 2015 on usages of Aadhaar, it is hereby clarified that use of Aadhaar Card and seeding of bank accounts with Aadhaar numbers is purely voluntary and it is not mandatory.

**Jan 18, 2016 : Reserve Bank holds meeting with banks, NBFCS and ARCs**

Senior officials from RBI, as well as senior officials from the concerned regulation and supervision departments, today held a meeting with senior executives of major

banks, Non-Banking Financial Companies (NBFCs) and Asset Reconstruction Companies (ARCs) to discuss the current challenges with regard to the management of stressed assets in the banks' books and the implementation of the various measures taken by the Bank in this regard.

The meeting reviewed the functioning of the Joint Lenders' Forum (JLF) Mechanism, Flexible Restructuring of Long Term Project Loans, Strategic Debt Restructuring Scheme and regulations on sale of assets by banks to Asset Reconstruction Companies.

**Date : Jan 22, 2016 : RBI to issue 100 Banknotes with incorporation of ascending size of Numerals in the number panels, bleed lines and enlarged identification mark**

**Date : Jan 22, 2016 : RBI to issue 500 banknotes with inset letter 'E', ascending size of numerals in number panels, bleed lines and enlarged identification mark**

RBI will shortly issue 500 denomination bank notes with three additional/revised features in the Mahatma Gandhi Series-2005, with inset letter 'E' in both the numbering panels, and the year of printing '2015' printed on the reverse of the Banknote. All the Banknotes in the denomination of 500 issued by the Bank in the past will continue to be legal tender.

**Jan 29, 2016 : Financial Reforms - Past and Present (Dr. Raghuram Rajan, Governor - January 29, 2016 - at NCAER, New Delhi)**

**Important Highlight : Financial Inclusion**

The Prime Minister's Jan Dhan Yojana has created accounts for much of the excluded population. Government has taken the next step of attaching a variety of financial services such as accident and life insurance to these accounts, and sending Direct Benefits such as scholarships, pensions, and subsidies to these accounts. We also have to ease access to bank accounts through Business Correspondents, payment banks, and point-of-sales machines so that they are used frequently. Easy payments, access to cash-in and cash-out facilities, and widespread availability of safe savings instruments have to be our next objectives in the financial inclusion of households.

When credit leads the process of financial inclusion, we risk lending to people who have little ability to manage money and overburdening them. By drawing them into the formal system through savings and payments first, then insurance, we get them accustomed to managing money before tempting them with credit. This is the successful method we have followed with Self Help groups, and is what we should do more widely. Importantly, we need a variety of firms and NGOs to help small businesses with management advice so that they can flourish.

Technology will also help reduce transaction costs, facilitating inclusion. We now have an internet portal (Vidyalakshmi) where students can apply to a variety of banks for education loans. We are exploring a similar portal for MSMEs, where MSMEs can apply easily to banks and where we can monitor timely responses to the loan applications.

**II. Cancellation, Withdrawl, Penalties and Directions on Urban Co-operative Banks**

Jan 01, 201:- RBI extends Directions issued to Shri Sai Urban Co-operative Bank Ltd., Mukhed Dist., Nanded, Maharashtra till June 30, 2016 The bank was under directions since July 01, 2015.

**Jan 04, 2016 :** RBI imposes Monetary Penalty of 10 Million on State Bank of Travancore for violation of its instructions, inter alia, on reporting of data to Central Repository of Information on Large Credits (CRILC).

**Jan 05, 2016 :** RBI extends Directions issued to the Brahmawart Commercial Co-operative Bank Ltd., Kanpur, Uttar Pradesh till April 06, 2016. Further, the bank can allow its depositors to withdraw a sum not exceeding 40,000 (Rupees Forty thousand only) of the total balance in every savings bank or current account or any other deposit account on one occasion during the entire period of Directions

**Jan 10, 2016 :** RBI extends Directions issued to Jijamata Mahila Sahakari Bank Ltd., Satara, Maharashtra, till July 09, 2016.The Bank was placed under directions for a period of six months from the close of business on July 10, 2015.

**Jan 11, 2016 :** RBI extends Directions issued to the United India Co-operative Bank Ltd., Nagina, Bijnor, Uttar Pradesh till April 14, 2016. The bank has been under directions since July 15, 2015.

**Jan 13, 2016 :** RBI extends Directions issued to The Suri Friends' Union Co-operative Bank Ltd., Suri, West Bengal till July 06, 2016

**Jan 19, 2016 :** Reserve Bank of India Penalizes 3.00 lakh (Three lakh only) Rajputana Mahila Urban Co-operative Bank Limited, Jaipur for violations of the guidelines/ directives issued by Reserve Bank on finance against properties situated in unauthorized colonies and providing locker facility at its Extension Counter without obtaining prior approval.

Date : Jan 22, 2016:- RBI extends Directions issued to CKP Co-operative Bank Ltd, Mumbai, Maharashtra till July 31, 2016. Bank was placed under directions for a period of six months vide directive dated April 30, 2014 from the close of business on May 2, 2014.



# ಸಹಕಾರಿ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿಯ ಅಗತ್ಯತೆ

ಶ್ರೀ ಬಿ.ಎ.ಮಹದೇವಪ್ಪ, ಸನ್ಮತಿ ಪ್ರತಿಷ್ಠಾನ, ಶಿವಮೊಗ್ಗ.

"ಸಹಕಾರ" ಎನ್ನುವುದು... "ಜೀವನದ ಎಲ್ಲ ಮೌಲ್ಯಗಳನ್ನು ಒಳಗೊಂಡ ಮತ್ತು ವ್ಯಕ್ತಿಯ ಔನ್ನತ್ಯವನ್ನು ಸಾಧಿಸುವ" ಒಂದು ಸುಂದರ ಪದ. ಹದಿನೆಂಟನೆಯ ಶತಮಾನದಲ್ಲಿ ಚಿಗುರೊಡೆದು, ಹತ್ತೊಂಬತ್ತನೆಯ ಶತಮಾನದಲ್ಲಿ ವಿಶ್ವದೆಲ್ಲೆಡೆ ಪಸರಿಸುತ್ತ, ಇಪ್ಪತ್ತನೆಯ ಶತಮಾನದಲ್ಲಿ ಹೆಮ್ಮರವಾಗಿ ಬೆಳೆದು, ಇಪ್ಪತ್ತೊಂದನೆಯ ಶತಮಾನದಲ್ಲಿ... ಸಹಕಾರ ತತ್ವ ಮತ್ತು ಮೌಲ್ಯಗಳನ್ನು ಆಧರಿಸಿ, ಸದಸ್ಯರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಸಾಧಿಸುವ ಉದ್ದೇಶದಿಂದ... ಒಂದು ಆರ್ಥಿಕ ವ್ಯವಸ್ಥೆಯಾಗಿ ಬೆಳೆದು ನಿಂತಿದೆ. ಒಂದು ಆಂದೋಲನವೇ ಆಗಿ ಹೋಗಿದೆ.

ಸಹಕಾರ... ಒಂದು ಹೊಸ ಕ್ಷೇತ್ರವಾಗಿ (Sector), ಆರ್ಥಿಕ ಪದ್ಧತಿಯಾಗಿ (Economic System) ಬೆಳೆದು ನಿಂತಿದೆ. ತೊಟ್ಟಿಲಿನಿಂದ... ಸಮಾಧಿಯವರೆಗೆ ಅಗತ್ಯವಿರುವ, ವಿವಿಧ ಸೇವೆಗಳನ್ನು, ವಿವಿಧ ವರ್ಗದ ಸಹಕಾರ ಸಂಘಗಳ ಮೂಲಕ ನೀಡುತ್ತಾ ಇಂದು... ಒಂದು ಸೇವಾ ಕ್ಷೇತ್ರವಾಗಿ ಮೂಡಿ ಬಂದಿದೆ. ಈ ಕ್ಷೇತ್ರಕ್ಕೆ ಪರ್ಯಾಯವಾದ ವ್ಯವಸ್ಥೆ ಯಾವುದೂ ಇಲ್ಲ.

ಇಂದಿನ ಖಾಸಗೀಕರಣದ ಹಿನ್ನೆಲೆಯಲ್ಲಿ... ಸಹಕಾರ ಕ್ಷೇತ್ರವು ಅನೇಕ ಸ್ಪರ್ಧೆಗಳಿಗೆ ತೆರೆದುಕೊಳ್ಳಬೇಕಾಗಿದೆ. ತಾಂತ್ರಿಕತೆಯ ಮೂಲಕ ಉತ್ತಮ ಗುಣಮಟ್ಟದ ಆಡಳಿತವನ್ನು ನೀಡಬೇಕಾದ ಅನಿವಾರ್ಯತೆ ಇದೆ. ಸದಸ್ಯ ಕೇಂದ್ರಿತ ಮತ್ತು ಸದಸ್ಯ ನಿರ್ದೇಶಿತ ವ್ಯವಹಾರಗಳನ್ನು ಕೈಗೊಂಡು, ಸದಸ್ಯರ ಮತ್ತು ಸಂಘದ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಬೇಕಾದ ಅಗತ್ಯತೆ ಎಂದಿಗಿಂತಲೂ ಇಂದು ಹೆಚ್ಚಾಗಿದೆ. ಸಂತೃಪ್ತ ಸದಸ್ಯ ಮತ್ತು ಸಂಘದ ಅಭಿವೃದ್ಧಿ ಪ್ರತಿಯೊಂದು ಸಹಕಾರ ಸಂಘದ ಧ್ಯೇಯವಾಗಿದೆ.

ಈ ನಿಟ್ಟಿನಲ್ಲಿ ಪ್ರತಿಯೊಂದು ಸಹಕಾರ ಸಂಘವು ವೃತ್ತಿಪರತೆ, ಪಾರದರ್ಶಕತೆ ಮತ್ತು ಉತ್ತರದಾಯಿತ್ವದಿಂದ ಕೂಡಿದ ಆಡಳಿತವನ್ನು ನೀಡಬೇಕಾಗಿದೆ. 20 ವರ್ಷಗಳ ಹಿಂದೆ ಸಹಕಾರ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದ ವ್ಯಕ್ತಿಗೆ ಸರಿಯಾಗಿ ಲೆಕ್ಕ ಬರೆಯುವುದು ಗೊತ್ತಿದ್ದರೆ ಸಾಕಿತ್ತು. ಆಯಾ ದಿನದ ನಗದು ಪುಸ್ತಕವನ್ನು ಆಯಾ ದಿನವೇ ಬರೆದು, ಅಂತಿಮ ನಗದು ಶಿಲ್ಕನ್ನು ಬ್ಯಾಂಕಿಗೆ ಜಮಾ ಮಾಡುವ ಕಾರ್ಯದರ್ಶಿ ಅಥವಾ ಲೆಕ್ಕಿಗನನ್ನು ಒಳ್ಳೆಯ ಕೆಲಸಗಾರನೆಂದು ಪರಿಗಣಿಸಲಾಗುತ್ತಿತ್ತು. ಸಂಘದ ಆಡಳಿತದ ಬಗ್ಗೆ ಬೇಸಿಕ್ ಅಂಶಗಳನ್ನು ತಿಳಿದುಕೊಂಡಿರುತ್ತಿದ್ದ, ಕಾರ್ಯದರ್ಶಿ ಅಥವಾ ಮ್ಯಾನೇಜರ್‌ನನ್ನು ದಕ್ಷ ಆಡಳಿತಗಾರನೆಂದು ನೋಡಲಾಗುತ್ತಿತ್ತು. ಆತ ಸದಸ್ಯರೊಂದಿಗೆ ಯಾವ ರೀತಿ ಮಾತನಾಡಿದರೂ ನಡೆಯುತ್ತಿತ್ತು. ಆದರೆ... ಇಂದು ಕೇವಲ ಸಂಘದ ಕೆಲಸಗಳನ್ನು ಸರಿಯಾಗಿ ಮಾಡಿದ ಮಾತ್ರಕ್ಕೆ ಎಲ್ಲವೂ "Okay" ಎನ್ನುವಂತಿಲ್ಲ. ಸಂಘದ ಅಧ್ಯಕ್ಷರು, ನಿರ್ದೇಶಕರು ಮತ್ತು ಸಹೋದ್ಯೋಗಿಗಳ ಜೊತೆ ಗೌರವದಿಂದ ವರ್ತಿಸಬೇಕು. ಸದಸ್ಯರು ಮತ್ತು ಗ್ರಾಹಕರನ್ನು ಸಂಯಮದಿಂದ ನಡೆಸಿಕೊಳ್ಳಬೇಕು. ಫೋನಿನಲ್ಲಿ ಚೆನ್ನಾಗಿ ಮಾತನಾಡಲು ತಿಳಿದಿರಬೇಕು. ಕೆಲಸದ ವೇಳೆಯ ನಂತರವೂ ಗ್ರಾಹಕರ ಸಮಸ್ಯೆಗಳೇನಾದರೂ ಇದ್ದಲ್ಲಿ, ಅವರ ಜೊತೆ ಮಾತನಾಡಿ ಪರಿಹಾರ ದೊರಕಿಸಿಕೊಡುವಂತಿರಬೇಕು. ಕಡಿಮೆ ಸಮಯದಲ್ಲಿ, ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಸೇವೆಯನ್ನು ಗ್ರಾಹಕರಿಗೆ ಒದಗಿಸುವ ನಿಟ್ಟಿನಲ್ಲಿ ಕೆಲಸ ಮಾಡುವಂತಿಬೇಕು.

ತಾಂತ್ರಿಕತೆಯ ಈ ದಿನಗಳಲ್ಲಿ ಕಂಪ್ಯೂಟರ್‌ನಲ್ಲಿ ಕೆಲಸ ಮಾಡಲು ತಿಳಿದಿರಬೇಕು. ಅಂದಾಜಿಗೆ ಏನೂ ಹೇಳದೆ, ಕಂಪ್ಯೂಟರ್‌ನ ಪ್ರಿಂಟ್‌ಔಟ್ ಮೂಲಕ ಸ್ಪಷ್ಟ ಮಾಹಿತಿಯನ್ನು ಸಲ್ಲಿಸಲು ಸಮರ್ಥನಿರಬೇಕು. ತನ್ನ ಕೆಲಸವನ್ನು ಮಾಡಿದರೆ ಮಾತ್ರ ಸಾಕಾಗುವುದಿಲ್ಲ, ಪಕ್ಕದ ಟೇಬಲ್‌ನವನ ಕೆಲಸವೂ ಗೊತ್ತಿರಬೇಕು. ತಪ್ಪು ಮಾಡಿದಾಗ ಹೊಣೆಗಾರಿಕೆಯನ್ನು ಹೊರುವಂತಹ ಮನೋಭಾವ ಇರಬೇಕು. ಸಮಯಪಾಲನೆ, ಉತ್ತಮ ಸಂವಹನ, ವಿಷಯದ ಬಗ್ಗೆ ಅಧ್ಯಯನ, ಕೆಲಸದ ಬಗ್ಗೆ ಆಸಕ್ತಿ, ತಂಡದಲ್ಲಿ ಕೆಲಸ ಮಾಡುವ ಉತ್ಸಾಹ, ಸಮಸ್ಯೆಗಳು ಉಂಟಾದಾಗ ಅವುಗಳನ್ನು ಪರಿಹರಿಸಿಕೊಳ್ಳುವ ವ್ಯವಧಾನ... ಇವೆಲ್ಲ ಗುಣಗಳನ್ನು ವೃತ್ತಿ ಕೌಶಲಗಳೆಂದು ಕರೆಯಲಾಗಿದೆ. ವೃತ್ತಿ ಕೌಶಲಗಳನ್ನು ಹೊಂದಿರುವ ಕೆಲಸಗಾರರು ಇಂದು ಸಹಕಾರ ಕ್ಷೇತ್ರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬೇಕಾಗಿದ್ದಾರೆ. ಏಕೆಂದರೆ ಈ ಮನೋಭಾವದ ವ್ಯಕ್ತಿಗಳು ತಮ್ಮ ಉದ್ಯೋಗ ಕ್ಷೇತ್ರದಲ್ಲಿ ಇತರರಿಗಿಂತ ಭಿನ್ನವಾಗಿ ನಿಲ್ಲುತ್ತಾರೆ.


ಶಾಲಾ-ಕಾಲೇಜುಗಳಲ್ಲಿ ಓದಿದ ನಾವು... ಡಿಗ್ರಿಗಳನ್ನು ಪಡೆಯುತ್ತೇವೆ. ಇದು Hard Skills ಮಾತ್ರ. Hard Skills alone might not sufficient to survive successfully. Soft skills are important in addition to hard skills. "ನಮ್ಮ ದೇಶದಲ್ಲಿ ವಿದ್ಯೆ ಇರಬಹುದು...! ಆದರೆ ಗುಣಮಟ್ಟದ ಕೆಲಸಗಾರರು ಬಹಳ ಕಡಿಮೆ. ಶೇ.75ರಷ್ಟು ಪದವೀಧರ ಇಂಜಿನಿಯರುಗಳು ಕೆಲಸ ಮಾಡಲು ಸಮರ್ಥರಿಲ್ಲ. ಅವರಿಗೆ ಭಾಷೆ, ಬರಹ, Programme ಬರುವುದಿಲ್ಲ" ಎಂದು NASCOM ಸಂಸ್ಥೆಯು ವರದಿ ಮಾಡಿದೆ.

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Posting Day 8th.
Posted at Bangalore PSO, Mysore Road, Bangalore 560026
Registered No. RNP/BGW/1744/2014-16. RNI No. KARBIL - 2004/18001. Pages 28

ಇತ್ತೀಚಿಗೆ ಒಂದು ದೊಡ್ಡ ಕಂಪನಿ... ತರಕಾರಿಯನ್ನು ಮನೆ-ಮನೆಗೂ ತಲುಪಿಸಲು ಎಂ.ಬಿ.ಎ. ಮಾಡಿದವರು ಬೇಕೆಂದು ಪ್ರಕಟಣೆ ನೀಡಿತು. ಆಯ್ಕೆಯಾದ ಅಭ್ಯರ್ಥಿಗಳಿಗೆ ಮೊದಲ ಹಂತದಲ್ಲಿಯೇ... ತರಕಾರಿ ಮಾರುವುದು ಹೇಗೆ? ರೈತರೊಂದಿಗೆ ಮಾತನಾಡುವುದು ಹೇಗೆ? ಎಂಬುದರ ಬಗ್ಗೆ ತರಬೇತಿ ನೀಡಲಾಯಿತು. ಏಕೆಂದರೆ... ಕೇವಲ ಎಂ.ಬಿ.ಎ ಇದ್ದರಷ್ಟೇ ಪ್ರಯೋಜನವಿಲ್ಲ. ವ್ಯಾಪಾರಕ್ಕೆ ಬೇಕಾದ ತಂತ್ರಕೌಶಲಗಳ ಬಗ್ಗೆಯೂ ತಿಳಿದುಕೊಳ್ಳಬೇಕಾಗುತ್ತದೆ. ಇದನ್ನೇ... ಸಾಫ್ಟ್ ಸ್ಕಿಲ್ಸ್ ಎನ್ನುತ್ತೇವೆ. ಕೆಲಸವನ್ನು ಸರಿಯಾಗಿ ಮಾಡುವುದು ದಕ್ಷತೆ. ಆದರೆ ಸರಿಯಾದ ಕೆಲಸವನ್ನು ಸರಿಯಾಗಿ ಮಾಡುವುದು... ಪರಿಣಾಮಕಾರಿ (effectiveness) ಎನಿಸುತ್ತದೆ. ಪರಿಣಾಮ ಕಾರಿಯಾಗಿ ಕೆಲಸ ಮಾಡುವುದೇ... ವೃತ್ತಿ ಕೌಶಲ. ವೈದ್ಯರಾಗಿರಬಹುದು, ಚಾರ್ಟರ್ಡ್ ಅಕೌಂಟೆಂಟ್ ಆಗಿರಬಹುದು, ಗ್ರಾಹಕ ಸೇವಾ ಅಧಿಕಾರಿಯಾಗಿರಬಹುದು, ವಿಮಾನ ಪರಿಚಾರಿಕೆ ಯಾಗಿರಬಹುದು, ಸಹಕಾರ ಸಂಘದ ಯಾವುದೇ ವೃತ್ತಿಯಲ್ಲಿರುವ... ಯಾರೇ ಆಗಿರಬಹುದು ಅವರಿಗೆ ವೃತ್ತಿ ಕೌಶಲ ಅಗತ್ಯವಾಗಿ ಇರಲೇಬೇಕು. ನಾವು 'ಏನು' ಕೆಲಸ ಮಾಡಬೇಕು ಎಂಬುದನ್ನು ನಮ್ಮ ಮೇಲಿನವರು ಹೇಳುತ್ತಾರೆ. ನಾವು 'ಹೇಗೆ' ಕೆಲಸ ಮಾಡಬೇಕು ಎಂಬುದನ್ನು ವೃತ್ತಿ ಕೌಶಲ ತಿಳಿಸಿಕೊಡುತ್ತದೆ. 'ಏನು' ಎಂಬುದನ್ನು ತಿಳಿದ ಸ್ಥಿತಿ ಅಪೂರ್ಣ. 'ಹೇಗೆ' ಎಂಬುದನ್ನು ಅರಿತಾಗ ಮಾತ್ರ ಅದು ಪರಿಪೂರ್ಣ.

**ವೃತ್ತಿ ಕೌಶಲಗಳ ಸಂಕ್ಷಿಪ್ತ ವಿವರಣೆ :**




ಸಹಕಾರ ಸಂಘ... ಸಾಮಾಜಿಕ ಬದ್ಧತೆಯನ್ನು ಹೊಂದಿರುವ ಒಂದು... ವ್ಯಾವಹಾರಿಕ ಸಂಸ್ಥೆ. ವ್ಯವಹಾರ ಎಂದರೆ ಬ್ಯುಸಿನೆಸ್. ಬ್ಯುಸಿನೆಸ್ ಎಂದರೆ ಜನ. ಸದಸ್ಯರು, ನಿರ್ದೇಶಕರು, ಸಿಬ್ಬಂದಿಗಳು, ಠೇವಣಿದಾರರು, ಗ್ರಾಹಕರು, ಇಲಾಖಾ ಅಧಿಕಾರಿಗಳು, ಸಾರ್ವಜನಿಕರು ಎಲ್ಲರೂ ಜನರೆ.

ಈ ಜನರ ಮನಸ್ಸು-ಮನಸ್ಸುಗಳ ನಡುವೆ ಉತ್ತಮ ಸಂಬಂಧವನ್ನು ಏರ್ಪಡಿಸುವುದೇ ನಿಜವಾದ ವ್ಯಾಪಾರ. ಸಂಬಂಧ ಎಂದರೆ... "ಕೂಡಿಸುವುದು" ಎಂದರ್ಥ. Any organization is manned by people; therefore soft skills are all about how you deal with people and present yourself. ಆದರೆ ಇದು ಸುಲಭದ ಮಾತಲ್ಲ. ಸಹಕಾರ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಎಲ್ಲ ವರ್ಗದ ಜನರ ಮನಸ್ಸನ್ನು ಕೂಡಿಸಿ ಕೆಲಸ ಮಾಡುವುದು ವೃತ್ತಿ ಕೌಶಲಗಳಲ್ಲಿ ಒಂದು. ಈ ಜನರೊಂದಿಗೆ ಉತ್ತಮವಾಗಿ ವ್ಯವಹರಿಸಲು ಹಾಗೂ ನಮ್ಮ ಸಾಮರ್ಥ್ಯವನ್ನು ತೋರಿಸಲು ಬೇಕಾಗುವ ಅಂಶವೇ ಸಾಫ್ಟ್‌ಸ್ಕಿಲ್ಸ್.

ಅಂತರಾಷ್ಟ್ರೀಯ ಸಂಸ್ಥೆ Daewoo Group ಅಧ್ಯಕ್ಷರಾದ ಕಿಮ್-ವೂ-ಚುಂಗ್‌ರವರು ಬರೆದಿರುವ "ಪ್ರತಿಯೊಂದು ಬೀದಿಗೂ ಚಿನ್ನದ ಮೆರುಗಿಡಿ" (Every street is paved with Gold) ಎಂಬ ಪುಸ್ತಕದಲ್ಲಿ "ಯಾವ ಮನುಷ್ಯರು ಕೆಲಸದಲ್ಲಿ ಸಂಪೂರ್ಣ ತಲ್ಲೀನರಾಗುವರೋ, ಅಂಥವರು ಎಂದಿಗೂ ಸೋಲಲಾರರು" ಎಂದು ಹೇಳಿದ್ದಾರೆ. ಕೆಲಸ ಬಹಳ ಅಮೂಲ್ಯವಾದದ್ದು. ಇದನ್ನು ಲಾಭ ನಷ್ಟಗಳಿಂದ ಅಳೆಯಲು ಸಾಧ್ಯವಿಲ್ಲ. 'ಕೆಲಸ ಕೇವಲ ಹೊಟ್ಟೆಬಟ್ಟೆಗೋಸ್ಕರ' ಎಂಬುದು ತಪ್ಪು.

ಕೆಲಸ ಮಾಡುವಾಗ ಅದರಿಂದಾಗುವ ಆರ್ಥಿಕ ಸಫಲತೆಯ ಬಗ್ಗೆಯೇ ಯೋಚಿಸದೆ, ಕೆಲಸದಿಂದಾಗುವ ಗುರಿ ಸಾಧನೆ, ವ್ಯಕ್ತಿಗತ ಅನುಭವ, ಅದರಿಂದಾಗುವ ಹರ್ಷ, ತನ್ಮೂಲಕ ಸಮಾಜಕ್ಕೆ ಆಗುವ ಸಹಾಯ ಇವುಗಳ ಬಗ್ಗೆ ನಾವು ಯೋಚಿಸಬೇಕು. ಇದನ್ನು ಯೋಚಿಸಿದಾಗ ಮಾತ್ರ ನಮಗೆ, ನಾವು ಮಾಡುವ ಕೆಲಸದ ಮೇಲೆ ಆಸಕ್ತಿ ಮೂಡುತ್ತದೆ. ಆಸಕ್ತಿಯಿಂದ ಮಾಡಿದ ಯಾವುದೇ ಕೆಲಸವು ಗುಣಮಟ್ಟದಿಂದ ಕೂಡಿರುತ್ತದೆ. ಗುಣಮಟ್ಟದ ಕೆಲಸ... ವೃತ್ತಿ ಕೌಶಲದ ಲಕ್ಷಣ.

ಮುಂದಿನ ಸಂಚಿಕೆಗೆ...

ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್,1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1-ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು.560 010. ದೂ: 080 - 23525546
ಮೈಸೂರು ವಿಭಾಗೀಯ ಕಛೇರಿ : ನಂ. 200, ಶಂಕರ ಮಠ ಮುಖ್ಯರಸ್ತೆ, ಕಿಲ್ಲೇ ಮೊಹಲ್ಲಾ, ಮೈಸೂರು. ದೂ : 0821 - 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂ : 0831 - 2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1-4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಕಲಬುರಗಿ - 585102. ದೂ. 08472 - 270222.

Edited, Printed and Published by Sharangouda G. Patil - Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010